WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಡಿಸೆಂಬರ್ 2011


॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-11 ಸಂಚಿಕೆ-12 ಪುಟಗಳು-10 Registered Under No.J/UDP/1260/2009-2011 Dated from 01-12-2008 to 31-12-2011.



ಮಂಗಳಗೌರೀ ವ್ರತ ಕಥಾಸಾರ - ವೈ. ಯಂ. ಶ್ರೀಧರ ರಾವ್ ಪುಟ-4

ಧರ್ಮವ್ಯಾಧನೆಂಬ ಅಂತ್ಯಜನ ಕತೆ - ವೈ. ಶಂಕರನಾರಾಯಣ ರಾವ್, ಪಡುಬಿದ್ರಿ ಪುಟ-5



ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



ಡಾ। ಎಚ್.ವಿ.ನರಸಿಂಹಮೂರ್ತಿ ಪುಟ-6

ಯುರೋಪ್ ಪ್ರವಾಸ ಕಥನ ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ ಪುಟ-7



## ಪಡುಬಿದ್ರಿ : ''ಅಮ್ಮ-ಜೋಕುಳ್ನೊ ಪೊರ್ಲುದೊ ಕೂಟ''



ಮಹಿಳಾ ವೇದಿಕೆ, ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ವತಿಯಿಂದ ನವೆಂಬರ್ 20ರಂದು ''ಅಮ್ಮ-ಜೋಕುಳ್ನೊ ಪೊರ್ಲುದೊ ಕೂಟ'' ಎಂಬ ವಿಶಿಷ್ಟವಾದ ಕಾರ್ಯಕ್ರಮವನ್ನು ಪಡುಬಿದ್ರಿಯ 'ಉದಯಾದ್ರಿ ಶ್ರೀ ಬಾಲ ಗಣಪತಿ-ಪ್ರಸನ್ನ ಪಾರ್ವತಿ' ದೇವಸ್ಥಾನದ ವಠಾರದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಐದು ಮಂದಿ ಮಾತೆಯರು, ತಮ್ಮ ಮುದ್ದು ಕಂದಮ್ಮಗಳೊಂದಿಗೆ ದೀಪ ಬೆಳಗಿಸುವುದರ ಮೂಲಕ ಸಾಂಪ್ರದಾಯಿಕ ರೀತಿಯಲ್ಲಿ ಉದ್ಘಾಟಿಸಿದರು. ಮಕ್ಕಳಿಗೂ, ತಾಯಂದಿರಿಗೂ ವಿವಿಧ ರೀತಿಯ ಅದೃಷ್ಟದ ಆಟಗಳ ಸ್ಪರ್ಧೆಗಳನ್ನು ನಡೆಸಲಾಯಿತು. ಹಾಗೆಯೇ ಪುರುಷರಿಗೂ ಹಗ್ಗ-ಜಗ್ಗಾಟ ಸ್ಪರ್ಧೆ ನಡೆಯಿತು.

ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಸರೋಜಿನಿ

(3ನೇ ಪುಟಕ್ಕೆ...)

## ಕಾರ್ಕಳ : ಮನೆಯ ಮಂಗಳೆಗೆ ಅಂಗನೆಯರ ಸಮ್ಮಾನ




''ಯಾರು ಯಾರನ್ನೊ ಕರೆದು ಸನ್ಮಾನಿಸುತ್ತೇವೆ. ಆದರೆ ಸದಾ ನಮ್ಮ ಸಂಘದ ಏಳಿಗೆಗಾಗಿ ಶ್ರಮಿಸುತ್ತ ಹತ್ತು ಹಲವು ಸಂಘ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ದುಡಿಯುತ್ತ ಸದ್ದಿಲ್ಲದೆ ಸುದ್ದಿಯಾಗುತ್ತಿರುವ ಸಾವಿತ್ರಿ ಮೇಡಂರ ಸಾಧನೆ ಸಾಧಾರಣ ಸ್ತ್ರೀಯರಿಗೆ ಸಾಧ್ಯವಿಲ್ಲ. ಅವರನ್ನು ಸನ್ಮಾನಿಸುವ ಮೂಲಕ ನಮ್ಮನ್ನು ನಾವೇ ಗೌರವಿಸಿಕೊಂಡಂತಾಗಿದೆ'' ಎಂದು ಶ್ರೀಮತಿ ಭಾರತಿ ಐ.ಕೆ. ನುಡಿದರು.

ಅವರು ಕಾರ್ಕಳ ಅನಂತಶಯನದ ಶಾರದಾ ಮಹಿಳಾ ಮಂಡಲದಲ್ಲಿ ನಡೆದ ಶ್ರೀಮತಿ ಸಾವಿತ್ರಿ ಮನೋಹರರ ಸನ್ಮಾನ ಸಮಾರಂಭದ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಿದ್ದರು. ಸ್ಕೌಟ್ ಗೈಡ್ಸ್‌ನಲ್ಲಿ ರಾಷ್ಟ್ರಮಟ್ಟದ ತರಬೇತಿದಾರರಾಗಿ ಪ್ರಶಸ್ತಿ ಪತ್ರ ಪಡೆದ ಸಾವಿತ್ರಿ ಮನೋಹರ್ ಕಾರ್ಕಳದ ಪ್ರಥಮ ಹಾಗೂ ಏಕಮೇವ ಗೈಡ್ ಕ್ಯಾಪ್ಟನ್ ಆಗಿ ಆಯ್ಕೆಯಾದು

(3ನೇ ಪುಟಕ್ಕೆ...)

## 2012-ಹೊಸ ವರ್ಷದ ಶುಭಾಶಯಗಳು

ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸಿದ ಶ್ರೀನಿಧಿ ಕಂಪ್ಯೂಟರ್ ಗ್ರಾಫಿಕ್ಸ್ ಉಡುಪಿ ಮತ್ತು ಅಗ್ರಹಾರ ಆಫ್‌ಸೆಟ್ಸ್ ಉಡುಪಿ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ ''2012-ಹೊಸ ವರ್ಷ'' ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

-ಸಂಪಾದಕ ಮಂಡಳಿ

## ಶ್ರೀ ಶಾರದಾ ದೇವಸ್ಥಾನ



ಕುಂಜಿಬೆಟ್ಟು, ಶಾರದಾ ನಗರ, ಉಡುಪಿ-576 102

ಶ್ರೀಶಾರದಾ ದೇವಸ್ಥಾನದಲ್ಲಿ ಸಮಾಜ ಬಾಂಧವರ ಹಾಗೂ ಪರಿಸರದ ಭಕ್ತಾಭಿಮಾನಿಗಳ ಅಪೇಕ್ಷೆಯಂತೆ ತಾ.25-12-2011ನೇ ಆದಿತ್ಯವಾರ

**ಸಾಮೂಹಿಕ ಚಂಡಿಕಾಯಾಗವು**

ನಡೆಯಲಿರುವುದು.

**ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಕ್ತ ಬಾಂಧವರೆಲ್ಲರೂ ಪಾಲ್ಗೊಂಡು ಶ್ರೀ ದುರ್ಗಾಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

- ಚಂಡಿಕಾಯಾಗದ ಕರ್ತೃಗಳಾಗಲಿಚ್ಛಿಸುವವರು ದೇವಸ್ಥಾನದ ಅರ್ಚಕರ ಅಥವಾ ಶ್ರೀಶಾರದಾ ಮಂಟಪದ ಮ್ಯಾನೇಜರವರಲ್ಲಿ ರೂ.300/-ನ್ನು ನೀಡಿ ರಶೀದಿ ಪಡೆದುಕೊಳ್ಳಬೇಕಾಗಿ ವಿನಂತಿ.
- ಯಾಗಕ್ಕೆ ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ವೀಳ್ಯದೆಲೆ, ಅಡಿಕೆ, ಗಂಧ, **ಹತ್ತಿ ನೂಲಿನ ಅಥವಾ ರೇಷ್ಮೆಯ** ರವಿಕೆ ಕಣ, ಸೀರೆ, ಯಾಗ ದ್ರವ್ಯಗಳು, ಸಮಿತ್ತು, ಪುಷ್ಪ, ತುಳಸಿ ತಂದಲ್ಲಿ ಯಾಗ ದೇವತೆಗೆ ಅರ್ಪಿಸುವ ಅವಕಾಶವಿದೆ.
- ಸೇವಾ ಕರ್ತೃಗಳು ಬೆಳಿಗ್ಗೆ ಗಂಟೆ 8-00ಕ್ಕೆ ಯಾಗ ಸಂಕಲ್ಪಕ್ಕಾಗಿ ಉಪಸ್ಥಿತರಿರಬೇಕಾಗಿ ವಿನಂತಿ. ಗಂಟೆ 12-00ಕ್ಕೆ ಯಾಗದ ಪೂರ್ಣಾಹುತಿ ನಡೆಯಲಿದೆ.

ವಿ.ಸೂ. : ಕರ್ತೃಗಳಿಗೆ ಪ್ರತ್ಯೇಕವಾಗಿ ಯಾಗ ಪ್ರಸಾದ ನೀಡುವ ವ್ಯವಸ್ಥೆ ಇದೆ. (ರಶೀದಿ ತೋರಿಸಿ ಪಡೆದುಕೊಳ್ಳಬಹುದು) ಉಪಸ್ಥಿತಿ ಸಾಧ್ಯವಿಲ್ಲದ ಕರ್ತೃಗಳು ಮರುದಿನ ರಶೀದಿ ತೋರಿಸಿ ಶಾರದಾ ಮಂಟಪದ ಮ್ಯಾನೇಜರರಿಂದ ಪ್ರಸಾದ ಪಡೆದುಕೊಳ್ಳಬಹುದು.

- ವ್ಯವಸ್ಥಾಪಕರು.

*ಸಂಜೆ ಗಂಟೆ 7-00ರಿಂದ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು ಇವರಿಂದ ಪ್ರಮೀಳಾರ್ಜುನ -ಘೋರಭೀಷಣ ಕಾಳಗ-ವೀರ ಬಭ್ರುವಾಹನ ಯಕ್ಷಗಾನ (ಸುಮಾರು 2.30 ಗಂಟೆ ಅವಧಿ)*

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಚಿಂತನ

'ಸ್ನೇಹ'ವನ್ನು ಯಾರಾದರೊಡನೆ ಮಾಡುವ ಮೊದಲು ಸ್ವಲ್ಪ ಯೋಚಿಸಿಕೊಳ್ಳಿ ಎಂಬುದು ವಾಡಿಕೆ. ಆದರೆ ಹೆಚ್ಚಿನ ಸ್ನೇಹಿತರು ಆಕಸ್ಮಿಕವಾಗಿ ಒಬ್ಬರನ್ನೊಬ್ಬರು ಭೇಟಿಯಾಗುವರೆಂಬುದೂ ಸತ್ಯ.

ವಿದ್ಯಾರ್ಥಿ ಜೀವನದಲ್ಲಿ, ಕಛೇರಿ ಕೆಲಸದಲ್ಲಿ ವ್ಯಾಪಾರ ವ್ಯವಹಾರಗಳಲ್ಲಿ ಜೊತೆಯಲ್ಲಿದ್ದು ಸ್ನೇಹಿತರಾಗುವುದೂ ಇದೆ. ಇಂತಹ ಸ್ನೇಹವು ಅವರು ಜೊತೆಯಲ್ಲಿರುವವರೆಗೆ ಮಾತ್ರ ಮುಂದುವರಿದು ಅವರ ಅಗಲಿಕೆಯಲ್ಲಿ ನಿಂತು ಬಿಡುವುದೂ ಇದೆ. ಅಗಲಿಕೆಯಲ್ಲಿಯೂ, ದೂರ ದೂರದಲ್ಲಿದ್ದರೂ 'ಸ್ನೇಹ'ವನ್ನು ಮುಂದುವರಿಸಿಕೊಂಡು ಹೋದರೆ ಅದು ನಿಜವಾದ ಸ್ನೇಹವೆನಿಸುತ್ತದೆ.


ಕೆಲವೊಮ್ಮೆ ಬಸ್ಸು, ರೈಲು ಪ್ರಯಾಣದಲ್ಲಿ, ಮಾರ್ಕೆಟ್‌ನಲ್ಲಿ, ಪಾರ್ಕ್‌ಗಳಲ್ಲಿ, ಸಿನೇಮಾ ಮಂದಿರದಲ್ಲಿ, ವಾಕಿಂಗ್ ಸಮಯದಲ್ಲಿ ಪರಸ್ಪರ ಬೇಟಿಯಾಗಿ ಪರಿಚಿತರಾಗಿ ಅದೇ ಸ್ನೇಹಕ್ಕೆ ಒಳಪಟ್ಟ ಸಾಕಷ್ಟು ಪ್ರಸಂಗಗಳೂ ಇವೆ. ಇಂತಹ ಸ್ನೇಹವು ಉಳಿದೆಲ್ಲಾ ಸ್ನೇಹಗಳಿಗಿಂತಲೂ ಮಧುರವಾಗಿರುತ್ತದೆ. ಪ್ರಬುದ್ಧಪ್ರಾಯದ ಅನ್ಯಲಿಂಗಿಗಳ ಆಕಸ್ಮಿಕವಾಗಿ ಭೇಟಿಯಾಗಿ ಕೊನೆಗೆ ಅವರೇ ದಾಂಪತ್ಯ ಜೀವನಕ್ಕೆ ಪ್ರವೇಶಿಸಿ, ಸತಿ-ಪತಿಗಳಾಗುವುದನ್ನು ಕಾದಂಬರಿ, ಕಥೆ, ಸಿನೇಮಾ, ಟಿ.ವಿ., ಧಾರಾವಾಹಿಗಳಲ್ಲಿ ಪ್ರತಿದಿನ ನಾವು ಕಾಣುತ್ತೇವೆ.

ಪರಸ್ಪರರು ತನ್ನ ಸ್ನೇಹಿತನ ಒಳಿತು ಕೆಡುಕುಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಒಬ್ಬರಿಗೊಬ್ಬರು ಸಹಕಾರಿಗಳಾಗಿಯೂ ಇರುವರು. ಇಂತಹ ಸ್ನೇಹವೇ ಬಹಳಷ್ಟು ಕಾಲ ಇವರನ್ನು ಒಂದೇ ಪಾಶದಲ್ಲಿ ಕಟ್ಟಲ್ಪಡುತ್ತದೆ.

ಯಾರಾದರೂ ಕಷ್ಟದಲ್ಲಿ ಬಿದ್ದಾಗ ಬಂಧು ಬಳಗಕ್ಕಿಂತಲೂ ಹೆಚ್ಚಿನ ಆದರ, ಪ್ರೀತಿಗೆ ಒಳಗಾಗುವುವವನು ಅವನ ಸ್ನೇಹಿತ. ಅವನು ಆಗ ಆಪತ್‌ಬಾಂಧವನಾಗಿ ತನ್ನ ಸ್ನೇಹಿತನನ್ನು ಉಳಿಸಲು ಪ್ರಯತ್ನಿಸುತ್ತಾನೆ.

ಹಿಗೆ ನಿಜವಾದ ಪ್ರೀತಿ ಎಂದರೆ ಈ ಕಷ್ಟ-ಸುಖಗಳಲ್ಲಿ ಭಾಗಿಯಾಗಿ ಪರಸ್ಪರ ಸಹಕಾರಿಗಳಾಗಿರುವುದು ಎಂದು ತಿಳಿಯಬಹುದು.

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಅಲ್ಲಿ ಸತ್ಯಭಾಮೆಯ ಉದ್ಯಾನವನದಲ್ಲಿ ಅದನ್ನು ನೆಡಿಸಿದನು. ಇಂದ್ರನ ಸ್ವಭಾವದ ವೈಚಿತ್ರ್ಯವೆಂದರೆ ತನ್ನ ಕೆಲಸವಾಗಬೇಕಾದಾಗ ಶ್ರೀಕೃಷ್ಣನ ಕಾಲುಹಿಡಿಯುವುದು, ಕೆಲಸವಾದ ಮೇಲೆ ಕೃಷ್ಣನಿಗೇ ತಿರುಗಿ ಬೀಳುವುದು!

ಅನಂತರ ಸರ್ವಶಕ್ತನಾದ ಭಗವಂತನು ಒಂದೇ ಮುಹೂರ್ತದಲ್ಲಿ, ಬೇರೆ ಬೇರೆ ಭವನಗಳಲ್ಲಿ ಅಷ್ಟೂ ರಾಜಪುತ್ರಿಯರನ್ನು ಅಷ್ಟೇ ರೂಪಗಳನ್ನು ತಾಳಿ ವಿವಾಹವಾದನು. ಹಾಗೇ ಅವರೆಲ್ಲರ ಜೊತೆಯಲ್ಲಿ ಸಾಮಾನ್ಯ ಗೃಹಸ್ಥನಂತೆ ಸಂಸಾರ ನಡೆಸಿದನು. ಲಕ್ಷ್ಮಿಯ ಅಂಶಭೂತರೇ ಆದ ಆ ರಾಜಕುಮಾರಿಯರು ನಿರಂತರವಾಗಿ ಹರಿಸಾನ್ನಿಧ್ಯದ ಸುಖವನ್ನನುಭವಿಸಿದರು. ಹಾಗೇ ಅನನ್ಯ ಪ್ರೇಮದಿಂದ ಅವನ ಸೇವೆಯನ್ನು ಮಾಡಿದರು.

★★★★ ★★★★

ಶ್ರೀಕೃಷ್ಣನು ಪ್ರತಿಯೊಬ್ಬ ಪತ್ನಿಯಲ್ಲೂ ಹತ್ತು ಹತ್ತು ಮಕ್ಕಳನ್ನು ಪಡೆದನು. ಅವರೆಲ್ಲರೂ ಶ್ರೀಕೃಷ್ಣನಂತೆ ಸರ್ವಗುಣೋಪೇತರಾಗಿದ್ದರು. ಶ್ರೀಕೃಷ್ಣನಿಗೆ ರುಕ್ಮಿಣಿ ಮೊದಲಾದ ಎಂಟು ಪತ್ನಿಯರು ಪಟ್ಟಮಹಿಷಿಯರಾಗಿದ್ದರು. ಅವರೆಂದರೆ, ರುಕ್ಮಿಣಿ, ಸತ್ಯಭಾಮೆ, ಜಾಂಬವತಿ, ಸತ್ಯೆ, ಭದ್ರೆ, ಮಿತ್ರವಿಂದೆ, ಕಾಳಿಂದಿ ಮತ್ತು ಲಕ್ಷ್ಮಣೆ. ಇವರಲ್ಲದೆ ರೋಹಿಣಿ ಮೊದಲಾದ ಹದಿನಾರು ಸಾವಿರದ ನೂರು ಪತ್ನಿಯರೂ ಇದ್ದರು. ಅಷ್ಟಮಹಿಷಿಯರ ಮಕ್ಕಳ ಹೆಸರುಗಳನ್ನು ಮಾತ್ರ ಹೇಳಲು ಸಾಧ್ಯ.

1) ರುಕ್ಮಿಣಿಯ ಮಕ್ಕಳು :- ಪ್ರದ್ಯುಮ್ನ, ಚಾರುದೇಷ್ಣ, ಸುದೇಷ್ಣ, ಚಾರುದೇಹ, ಸುಚಾರು, ಚಾರುಗುಪ್ತ, ಭದ್ರಚಾರು, ಚಾರುಚಂದ್ರ, ವಿಚಾರು, ಚಾರು. ಇವರಲ್ಲದೆ ಚಾರುಮತಿ ಎಂಬ ಮಗಳೂ ಇದ್ದಳು.

2) ಸತ್ಯಭಾಮೆಯ ಮಕ್ಕಳು :- ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಾನ್, ಚಂದ್ರಭಾನು, ಬೃಹದ್ಭಾನು, ರತಿಭಾನು, ಶ್ರೀಭಾನು, ಪ್ರತಿಭಾನು.

3) ಜಾಂಬವತಿಯ ಮಕ್ಕಳು :- ಸಾಂಬ, ಸುಮಿತ್ರ, ಪುರುಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರಕೇತು, ವಸುಮಾನ್, ದ್ರವಿಡ, ಕ್ರತು.

4) ನಾಗ್ನಜಿತಿಯ ಮಕ್ಕಳು :- ವೀರ, ಚಂದ್ರ, ಅಶ್ವಸೇನ, ಚಿತ್ರಗು, ವೇಗವಾನ್, ವೃಷ, ಆಮ, ಶಂಕು, ವಸು, ಕುಂತಿ.

5) ಕಾಳಿಂದಿಯ ಮಕ್ಕಳು :- ಶ್ರುತ, ಕವಿ, ವೃಷ, ವೀರ, ಸುಬಾಹು, ಭದ್ರ, ಶಾಂತಿ, ದರ್ಶ, ಪೂರ್ಣಮಾಸ, ಸೋಮಕ.

6) ಲಕ್ಷ್ಮಣೆಯ ಮಕ್ಕಳು :- ಪ್ರಘೋಷ, ಗಾತ್ರವಾನ್, ಸಿಂಹ, ಬಲಿ, ಪ್ರಬಲ, ಊರ್ಧ್ವಗ, ಮಹಾಶಕ್ತಿ, ಸಹ, ಓಜ, ಅಪರಾಜಿತ.

7) ಮಿತ್ರವಿಂದೆಯ ಮಕ್ಕಳು :- ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ಅನ್ನಾದ, ಮಹಾಶ, ಪಾವನ, ವಹ್ನಿ, ಕ್ಷುಧಿ.

8) ಭದ್ರೆಯ ಮಕ್ಕಳು :- ಸಂಗ್ರಾಮಜಿತ್, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ್, ಜಯ, ಸುಭದ್ರ, ವಾಮ, ಆಯು, ಸತ್ಯಕ.

ಮಿಕ್ಕ ಪತ್ನಿಯರಲ್ಲಿ ರೋಹಿಣಿಗೆ ದೀಪ್ತಿಮಾನ್, ತಾಮ್ರತಪ್ತ ಮೊದಲಾದ ಮಕ್ಕಳಿದ್ದರು. ಶ್ರೀಕೃಷ್ಣನ ಮಕ್ಕಳು, ಮೊಮ್ಮಕ್ಕಳ ಒಟ್ಟು ಸಂಖ್ಯೆಯೇ ಕೋಟಿಯನ್ನು ಮೀರಿತ್ತು.

ಪ್ರದ್ಯುಮ್ನನ ಹೆಂಡತಿ ಮಾಯಾವತಿಯೆಂಬುದನ್ನು ಹಿಂದೆಯೇ ಹೇಳಿದೆ. ಆದರೆ ಅವನ ಸೋದರ ಮಾವನಾದ ರುಕ್ಮಿಯು ತನ್ನ ಮಗಳಾದ ರುಕ್ಮವತಿಯನ್ನು ಪ್ರದ್ಯುಮ್ನನಿಗೆ ಕೊಟ್ಟು ವಿವಾಹ ನೆರವೇರಿಸಿದ್ದನು. ಶ್ರೀಕೃಷ್ಣನ ದ್ವೇಷಿಯಾದ ರುಕ್ಮಿಯು ತನ್ನ ಮಗಳನ್ನು ಕೃಷ್ಣನ ಮಗನಿಗೆ ಕೊಟ್ಟದ್ದು ಹೇಗೆ ಎಂಬ ಸಂಶಯ ಸಹಜ. ಆದರೆ ರುಕ್ಮಿಗೆ ಕೃಷ್ಣನ ಮೇಲೆ ದ್ವೇಷವಿತ್ತೇ ಹೊರತು ತನ್ನ ತಂಗಿ ರುಕ್ಮಿಣಿಯ ಮೇಲಲ್ಲ. ಆದುದರಿಂದ ತಂಗಿಯ ಸಂತೋಷಕ್ಕಾಗಿ ರುಕ್ಮಿಯು ರುಕ್ಮವತಿಯನ್ನು ಪ್ರದ್ಯುಮ್ನನಿಗೆ ಕೊಟ್ಟಿದ್ದನು. ಅಲ್ಲದೆ ರುಕ್ಮವತಿಯೂ ತನ್ನ ಸೋದರಭಾವನಾದ ಪ್ರದ್ಯುಮ್ನನನ್ನು ಪ್ರೀತಿಸುತ್ತಿದ್ದಳು. ಆದುದರಿಂದ ಅವಳ ಸ್ವಯಂವರಕ್ಕೆ ಹೋಗಿದ್ದ ಪ್ರದ್ಯುಮ್ನನಿಗೆ ಅವಳು ವರಮಾಲೆಯನ್ನು ಹಾಕಿದ್ದಳು. ಆದರೆ ಇತರ ರಾಜರು ಪ್ರದ್ಯುಮ್ನನನ್ನು ಅಡ್ಡಗಟ್ಟಿದರು. ಪ್ರದ್ಯುಮ್ನನು ಅವರನ್ನೆಲ್ಲ ಸೋಲಿಸಿ ರುಕ್ಮವತಿಯನ್ನು ದ್ವಾರಕೆಗೆ ತಂದನು.

ರುಕ್ಮಿಣಿಯ ಮಗಳಾದ ಚಾರುಮತಿಯನ್ನು ಕೃತವರ್ಮನ ಮಗನಾದ ಬಲಿಯು ವಿವಾಹವಾಗಿದ್ದನು.

ರುಕ್ಮಿಯು ಇನ್ನೂ ಒಂದು ಸಂಬಂಧವನ್ನು ಕೃಷ್ಣನ ಮನೆತನದೊಡನೆ ಬೆಳೆಸಿದ್ದನು. ರುಕ್ಮವತಿಯ ಮಗನಾದ ಅನಿರುದ್ಧನಿಗೆ ತನ್ನ ಮೊಮ್ಮಗಳಾದ ರೋಚನೆಯನ್ನು ಕೊಟ್ಟು ವಿವಾಹ ನೆರವೇರಿಸಿದ್ದನು.

ಅನಿರುದ್ಧನ ವಿವಾಹಕ್ಕೆ ರಾಮ, ಕೃಷ್ಣ ಪ್ರದ್ಯುಮ್ನ, ಸಾಂಬ ಮೊದಲಾದವರು ಹೋಗಿದ್ದರು. ಆ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದ ಕಳಿಂಗದ ಅರಸನೇ ಮೊದಲಾದ ಅಂಹಕಾರಿ ರಾಜರು ರುಕ್ಮಿಯ ಕಿವಿಯೂದಿದರು, "ನೀನು ಪಗಡೆಯಾಟದಲ್ಲಿ ಬಲರಾಮನನ್ನು ಸೋಲಿಸು". ಇದರಿಂದ ಉತ್ತೇಜಿತನಾದ ರುಕ್ಮಿಯು ಬಲದೇವನನ್ನು ಪಗಡೆಯಾಟಕ್ಕೆ ಕರೆದನು. ಬಲರಾಮನು ಪಗಡೆಯಾಟದಲ್ಲಿ ಪ್ರವೀಣನಲ್ಲದಿದ್ದರೂ ಅವನಿಗೆ ಅದರಲ್ಲಿ ವ್ಯಸನವಿತ್ತು. ಆದುದರಿಂದ ರುಕ್ಮಿಯೊಡನೆ ಆಟಕ್ಕೆ ಕುಳಿತನು. ರಾಮನು ಕ್ರಮವಾಗಿ ನೂರು, ಸಾವಿರ, ಹತ್ತುಸಾವಿರ ನಾಣ್ಯಗಳನ್ನು ಕಳೆದುಕೊಂಡನು. ಆಗ ಕಳಿಂಗ ರಾಜನು ಹಲ್ಲುಕಿರಿಯುತ್ತಾ ಗಟ್ಟಿಯಾಗಿ ನಕ್ಕನು. ಬಲರಾಮನಿಗೆ ಅದು ಅಸಹ್ಯವೆನಿಸಿತು. ಮತ್ತೆ ರುಕ್ಮಿಯು ಒಂದು ಲಕ್ಷ ನಾಣ್ಯಗಳ ಪಣವಿಟ್ಟನು. ಅದನ್ನು ಹಲಾಯುಧನೇ ಗೆದ್ದನು. ಆದರೆ ರುಕ್ಮಿಯು ಕಪಟದಿಂದ ತಾನೇ ಗೆದ್ದುದಾಗಿ ಕೂಗಿಕೊಂಡನು. ಇದರಿಂದ ಬಲರಾಮನು ಕ್ಷುಬ್ಧನಾಗಿ ಹತ್ತುಕೋಟಿ ನಾಣ್ಯಗಳನ್ನು ಪಣಕ್ಕೊಡ್ಡಿದನು. ಈಗಲೂ ನ್ಯಾಯವಾಗಿ ರಾಮನೇ ಗೆದ್ದರೂ ರುಕ್ಮಿಯು ಮೋಸದಿಂದ ತಾನೇ ಗೆದ್ದುದೆಂದು ಬೊಬ್ಬೆಹಾಕಿದನು. ಬೇಕಾದರೆ ಪ್ರಾಶ್ನಿಕರು ನಿಶ್ಚಯಿಸಲಿ ಎಂದನು. ಆಗ ಆಕಾಶವಾಣಿಯಾಯಿತು, "ಬಲರಾಮನೇ ಪಂದ್ಯವನ್ನು ಗೆದ್ದವನು. ರುಕ್ಮಿಯ ಮಾತು ಅಧರ್ಮದ್ದೂ, ಸುಳ್ಳೂ ಆಗಿದೆ". ಆದರೆ ರುಕ್ಮಿಗೆ ವಿನಾಶಕಾಲ ಬಂದದ್ದರಿಂದ ಅವನ ಬುದ್ಧಿ ವಿಪರೀತವಾಯಿತು. ದುಷ್ಟರಾಜರ ಪ್ರೇರಣೆಯಿಂದ ಅವನು ಬಲರಾಮನನ್ನೂ, ಯಾದವರನ್ನೂ ಅಪಹಾಸ್ಯ ಮಾಡುತ್ತ ಹೀಗೆಂದನು, "ನಿಮ್ಮಂತಹ ದನಮೇಯಿಸುವವರಿಗೆ ಪಗಡೆಯಾಟ ತಿಳಿಯುವುದು ಹೇಗೆ? ನೀವು ಗೋವಳತನದಲ್ಲಿ ನಿಷ್ಣಾತರು. ಪಗಡೆಯಾಡುವುದು, ಬಾಣಗಳನ್ನು ಚಲಾಯಿಸುವುದು ಹೇಗೆಂಬುದನ್ನು ನಮ್ಮಂತಹ ಕ್ಷತ್ರಿಯರು ಬಲ್ಲರೇ ಹೊರತು ನಿಮ್ಮಂತಹ ಕಾಡಾಡಿಗಳಲ್ಲ".

(ಮುಂದುವರಿಯುವುದು)

## ಹೊಸ ಬೆಳಕು

### ನಲ್ನುಡಿ :

ಕೃಷಿತೋ ನಾಸ್ತಿ ದುರ್ಭಿಕ್ಷಂ।
ಜಪತೋ ನಾಸ್ತಿ ಪಾತಕಂ।
ಮೌನತೋ ಕಲಹಂ ನಾಸ್ತಿ।
ನಾಸ್ತಿ ಜಾಗರತೋ ಭಯಂ॥

ಅಂದರೆ ಕೃಷಿ ಮಾಡುವುದರಿಂದ ದುರ್ಭಿಕ್ಷವಿಲ್ಲ. ಜಪಮಾಡುವುದರಿಂದ ಪಾಪವಿಲ್ಲ. ಮೌನವಾಗಿರುವುದರಿಂದ ಕಲಹವಿಲ್ಲ. ಜಾಗರೂಕತೆಯಿಂದ ಭಯವಿಲ್ಲ.

### ಪುಸ್ತಕ ಪರಿಚಯ :

**ನೆನಪಿನಂಗಳದಲ್ಲಿ**

*ಲೇಖಕರು :* ಹಂ.ಪು.ನಾಗಮ್ಮ, ಕಳಸ
*ಸಂಪಾದಕರು :* ಶ್ರೀಮತಿ ಸಾವಿತ್ರಿ ಮನೋಹರ ರಾವ್ ಕಾರ್ಕಳ
*ಪ್ರಕಾಶಕರು :* ಸಂದೀಪ ಸಾಹಿತ್ಯ, ಆತ್ರಾಡಿ, ಉಡುಪಿ
*ಬೆಲೆ :* ರೂ.100/-

ಸಂದೀಪ ಸಾಹಿತ್ಯ ಪ್ರಕಾಶಕಿ ಇಂದಿರಾ ಹಾಲಂಬಿ 'ನೆನಪಿನಂಗಳ' ಕೃತಿಯಲ್ಲಿ ಹೀಗೆ ಅಭಿನಂದನೆಗಳನ್ನು ಸಲ್ಲಿಸುತ್ತಾರೆ:- ಶ್ರೀಮತಿ ಸಾವಿತ್ರಿ ಮನೋಹರ (ಕಳಸ) ಅವರು ಸಂಪಾದಕಿಯಾಗಿ ಹೊರತಂದಿರುವ ಅಸಾಧಾರಣ ಗುಣದ ವ್ಯಕ್ತಿ ಚಿತ್ರ 'ನೆನಪಿನಂಗಳದಲ್ಲಿ (ಬೆಳಕು)' ಒಂದು ಅವಿಸ್ಮರಣೀಯ ಪ್ರಯತ್ನ ಫಲವಾಗಿದೆ. ಬೃಹತ್ ಆಲದ ಮರದ ಬೀಳಲುಗಳಂತೆ ವಿಸ್ತಾರ, ಬಲಯುತವಾಗಿ ಸ್ವಂತಿಕೆಯ ಸದ್ಗುಣ, ಸ್ವಾವಲಂಬನೆಯ ಉನ್ನತ ಪರಿಪಾಠವನ್ನು ತೋರ್ಪಡಿಸಿ ಬೆಳೆದಿರುವ ಈ ಒಂದು ಸುಂದರ, ಸ್ನೇಹಮಯ ಸಂಸಾರದ ಹತ್ತು ಹಲವು ಕವಲು (ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಬಂಧುಗಳು, ಮರಿಮಕ್ಕಳು)ಗಳಿಗೆ ತಾಯಿಬೇರು ಆಗಿರುವ ಮಾತೃದೇವತೆ ಶ್ರೀಮತಿ ಹಂ.ಪು.ನಾಗಮ್ಮನವರ ಬದುಕಿನ ಪುಟಗಳನ್ನು ಓದುವಾಗ (ಪ್ರತಿಯೊಬ್ಬರು ಬರೆದ ಬರಹ) ಮನಸ್ಸು ಪುಲಕಿತಗೊಳ್ಳುತ್ತದೆ. ಕಷ್ಟ, ಕಾರ್ಪಣ್ಯ, ಎಡರು ತೊಡರುಗಳನ್ನು ದಿಟ್ಟತನದಿಂದ ಎದುರಿಸಿ ಸಾರ್ಥಕತೆಯ ಶಿಖರ ಏರಿ ಸಂಭ್ರಮಿಸಿದ್ದಾರೆ ಈ ಮಹಾತಾಯಿ.

ಕೆ.ಭೋಜನರಾವ್, ನಿವೃತ್ತ ಕನ್ನಡ ಅಧ್ಯಾಪಕರು, ಪಡುಬಿದ್ರಿ ಇವರ ಈ ಕೃತಿಯಲ್ಲಿನ 'ಶುಭನುಡಿ' ಹೀಗಿದೆ :-"ಅಮ್ಮನ ಆತ್ಮ ಚರಿತ್ರೆಗೆ ಶುಭ ಹಾರೈಸಿ ಬರೆಯಿರಿ ಮಾವ" ಎಂದು ನುಡಿದು ನನ್ನ ಕೈಗೆ ಪುಸ್ತಕ ಕೊಟ್ಟ ಸಾವಿತ್ರಿಗೆ ಏನು ಹೇಳಬೇಕೆಂದು ತಿಳಿಯದೆ ಒಂದು ಗಳಿಗೆ ಮೂಕನಾಗಿಬಿಟ್ಟೆ, ನನಗೀಗ ಎಂಭತ್ತೆಂಟು ವರ್ಷ ಬರೆಯಲು ಶಕ್ತಿ ಸಾಲದು ಎಂದರೂ ಕೇಳಲಿಲ್ಲ. ಅವಳ ಅಭಿಮಾನ ಕಂಡು ಮಾತು ಹೊರಡಲಿಲ್ಲ. ಆದ್ದರಿಂದ ತುಂಬಾ ಬರೆಯಬೇಕೆನಿಸಿದರೂ ಸಾಧ್ಯವಾಗುತ್ತಿಲ್ಲ. ಆದರೂ ಸಂಕ್ಷಿಪ್ತವಾಗಿ ಹಾರೈಸುತ್ತಿದ್ದೇನೆ.

ಸಂಪಾದಕಿ ಶ್ರೀಮತಿ ಸಾವಿತ್ರಿ ಮನೋಹರ್ ರಾವ್, ಕಾರ್ಕಳ ಇವರು ಕೃತಿಯ ಬಗ್ಗೆ ಹೀಗೆ ತಿಳಿಸುತ್ತಾರೆ:- ಇದು ಅಮ್ಮನ ಆತ್ಮಕಥೆ ಜೊತೆಗೆ ಅಮ್ಮನನ್ನು ಅಭಿನಂದಿಸಿ ಹಿರಿಕಿರಿಯರು ಬರೆದ 'ಅಮ್ಮಾಭಿನಂದನೆ' ಅಂದರೆ ಈ ಕೃತಿ ಎರಡು ಭಾಗಗಳನ್ನು ಹೊಂದಿದೆ. ಪೂರ್ವಾರ್ಧದಲ್ಲಿ ಅಮ್ಮ ಬರೆದ ಕೆಲವು ಕಡೆ ಅಮ್ಮ ನನ್ನಿಂದ ಬರೆಸಿದ ಅಮ್ಮನ ಆತ್ಮ ವೃತ್ತಾಂತವಿದೆ. ಕೆಲವೊಮ್ಮೆ ಅಮ್ಮ ಸಂಕೋಚದಿಂದ ಚುಟುಕಾಗಿಸಿದ್ದನ್ನು, ಅಮ್ಮನನ್ನು ಕಾಡಿ ಬೇಡಿ, ಪೀಡಿಸಿ ಹೇಳಿಸಿ ಅದನ್ನೇ ಬರೆದಿದ್ದೇನೆ..... ಕೃತಿಯ ಎರಡನೇ ಭಾಗ "ಅಮ್ಮಾಭಿನಂದನೆ"ಕ್ಕೆ ಅಮ್ಮನ ಅಂತರಂಗಕ್ಕೆ ಹತ್ತಿರದವರು ಬರೆದ ಲೇಖನಗಳಿವೆ. ಕವನಗಳಿವೆ. ಚಿತ್ರಗಳಿವೆ. ಹಾರೈಕೆಗಳಿವೆ. ಅವರಲ್ಲಿ ಕೆಲವರು "ಏನು ಬರೆಯಲಿ ಹೇಗೆ ಬರೆಯಲಿ? ಹೃದಯದ ತುಂಬಾ ತುಂಬಿರುವ ಅಭಿಮಾನದ ಮಾತುಗಳನ್ನು ಬರೆದರೆ ಅದೇ ಒಂದು ಬೃಹದ್ಗ್ರಂಥವಾದೀತು" ಎಂದರೆ ಮತ್ತೆ ಕೆಲವರು "ಹೇಳಿದರೆ ಹಾಳಾಗುವುದು ಅನುಭವದ ಸವಿಯು, ಹೇಳದಿದ್ದರೆ ತಾಳಲಾರದ ಕಸಿವಿಸಿಯು" ಎಂದು ಹೇಳ್ತಾ ಬರೆದು ಕೊಟ್ಟಿದ್ದಾರೆ.

ಈ ಕೃತಿಯಲ್ಲಿ ಶ್ರೀಮತಿ ಸುಕನ್ಯಾ ಕಳಸರವರು ಬರೆದ "ಹೊಲಿಯುವ ಕೈಗಳು" ಎಂಬ ಕವನದ ಕೆಲವು ಸಾಲುಗಳು :-

*ಅಮ್ಮ-ನೀನು ಕಣ್ಣು ಸರಿಯಾಗಿ ಕಾಣಿಸುತ್ತಿದ್ದಾಗ*
*ಹಗಲಿಡೀ ದುಡಿದು ಹೈರಾಣಾಗಿಯೂ*
*ಹೊಲಿಯುತ್ತಿದ್ದೆ ರಾತ್ರಿ ಚಿಮಣಿಯ ಮಂಕು ಬೆಳಕಲ್ಲಿ*
*ನಮ್ಮೆಲ್ಲರ ಉಡುಪುಗಳ ಬಿಟ್ಟ ಹೊಲಿಗೆಗಳ*
*ಮುಚ್ಚಿಟ್ಟು ನಿನ್ನ ಅಂತರಾಳದ ದುಃಖ ದುಮ್ಮಾನಗಳ*
*ಕನ್ನಡಕ ಬಂದಾಗಲೂ ಅಷ್ಟೇ ಹೊಲಿಯುತ್ತಿದ್ದೆ ಹಾಗೇ..*

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ.

## ''ಅಮ್ಮ-ಜೋಕುಳ್ನೊ ಪೊರ್ಲುದೊ ಕೂಟ''

(...1ನೇ ಪುಟದಿಂದ)

ದೇವರಾವ್, ನಂದಿಕೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸರಕಾರದ ಕಾರ್ಮಿಕ ಇಲಾಖೆಯ ಸಹಕಾರ್ಯದರ್ಶಿಯಾದ ಶ್ರೀಮತಿ ವಿಮಲಾ ಪ್ರಭಾಕರ ರಾವ್ ಬೆಂಗಳೂರು, ಶ್ರೀಮತಿ ಮಲ್ಲಿಕಾ-ಭವಾನಿ ಶಂಕರರಾವ್ ಕೆಮ್ರಾಲ್, ಶ್ರೀಮತಿ ಪ್ರಸನ್ನ ಮೋಹನ್‌ರಾವ್ ಪಡುಬಿದ್ರಿ, ಶ್ರೀಮತಿ ಚಂಪಾ ರಾಮಚಂದ್ರ ರಾವ್ ಬಳ್ಕುಂಜೆ, ಕುಮಾರಿ ಸ್ವಾತಿ ಬೆಳ್ಳೆ ಮುಂಡ್ಕೂರು ಇವರು ವಹಿಸಿದ್ದರು. ವೇದಿಕೆಯ ಅಧ್ಯಕ್ಷೆ ಶ್ರೀಮತಿ ಶರಾವತಿ ರವಿರಾಜ್ ರಾವ್ ಇವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀಮತಿ ವಿಮಲಾ ಪ್ರಭಾಕರ್ ರಾವ್ ಇವರು ತಾಯಿ-ಮಕ್ಕಳ ಬಾಂಧವ್ಯದ ಬಗ್ಗೆ ಅಂದಿಗೂ-ಇಂದಿಗೂ ಇರುವ ವ್ಯತ್ಯಾಸವನ್ನು ತಿಳಿಸಿ, ಪಡುಬಿದ್ರಿಯಂತಹ ಚಿಕ್ಕ ಊರಿನಲ್ಲಿ ಇಂತಹ ವಿಶಿಷ್ಟವಾದ ಕಾರ್ಯಕ್ರಮವನ್ನು ಕಂಡು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅತಿಥಿಗಳು ವಿಜೇತರಿಗೆ ಬಹುಮಾನವನ್ನು ವಿತರಿಸಿದರು. ಶ್ರೀಮತಿ ವೇದಾವತಿ ದಿವಾಕರ ರಾವ್ ಇವರು ಧನ್ಯವಾದವನ್ನಿತ್ತರು. ಶ್ರೀಮತಿ ಸೀತಾದೇವಿ ಭಾಸ್ಕರ್‌ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

ವರದಿ : **ಸೀತಾದೇವಿ ಭಾಸ್ಕರ್‌ರಾವ್**

## ಮನೆಯ ಮಂಗಳೆಗೆ ಅಂಗನೆಯರ ಸಮ್ಮಾನ

(...1ನೇ ಪುಟದಿಂದ)

ದಲ್ಲದೆ ಸಾಹಿತ್ಯ, ಸಾಮಾಜಿಕ ಸೇವೆಯಲ್ಲೂ ತಮ್ಮ ಸೇವೆ ಸಲ್ಲಿಸುತ್ತಿರುವ ಬಗ್ಗೆ ಅವರೊಬ್ಬ ಉತ್ತಮ ಶಿಕ್ಷಕಿಯಾಗಿ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಶ್ರಮಿಸಿದ ಬಗೆಗೆ ಶ್ರೀಮತಿಯರಾದ ಶೈಲಜಾರಾವ್, ರಾಜೇಶ್ವರಿ, ಭಾರತಿ ಕುಲಕರ್ಣಿ, ಸುಮತಿಬಾಯಿ, ಸುಮನ ಟೀಚರ್ ಮುಂತಾದವರು ಪ್ರಶಂಸೆ ಮಾಡಿದರೆ, ಸಾಹಿತಿ ಶ್ರೀಮತಿ ವನಜಾರಾವ್ ತಮ್ಮ ಭಾವನೆಗಳನ್ನು ಕವನದಲ್ಲಿ ಹಾಡಿ ಸಾವಿತ್ರಿ ಮನೋಹರರ ಪ್ರತಿಭೆಗೆ ಕನ್ನಡಿ ಹಿಡಿದರು.

ಶ್ರೀಮತಿ ಭಾರತಿ ಕುಲಕರ್ಣಿ, ಸುಜಾತ ಜೆ.ಎಲ್. ಶೈಲಜಾ ರತ್ನಾಕರ್‌ರವರು ಶ್ರೀಮತಿ ಸಾವಿತ್ರಿ ಮನೋಹರರನ್ನು ಭಾರತೀಯ ಹಿಂದೂ ಸಂಪ್ರದಾಯದಂತೆ ಸನ್ಮಾನಿಸಿದರು.

ಶ್ರೀಮತಿ ಶಶಿಕಲ ನಿರ್ವಹಿದ ಕಾರ್ಯಕ್ರಮದ ಕೊನೆಗೆ ಶ್ರೀಮತಿ ಉಮಾ ಧನ್ಯವಾದ ಸಲ್ಲಿಸಿದರು.

ವರದಿ : **ಕೆ.ಸಿ.ಕೃತಿ, ಬಿ.ಎ. ಹೊಸನಗರ**

# ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಅನ್ನಪೂರ್ಣೇಶ್ವರಿ ಹೋಮ ಸಹಿತ-ನಿತ್ಯಾನ್ನದಾನ ಪ್ರಾರಂಭ

ತಾ.07-08-2011ರಂದು ಶ್ರೀಕ್ಷೇತ್ರದಲ್ಲಿ ಪರಿವರ್ತನೆಗೊಂಡ ''ಪಾಕಶಾಲೆಯ ಪ್ರವೇಶ''ವನ್ನು ಮಾಡಿದಾಗ, ಕ್ಷೇತ್ರದಲ್ಲಿ ''ನಿತ್ಯಾನ್ನದಾನ''ವನ್ನು ನಡೆಸಬೇಕೆಂದು ಕಂಡು ಬಂದಂತೆ, ಕ್ಷೇತ್ರದ ಅಭಿಮಾನಿ ಬಳಗ ಹಾಗೂ ಭಕ್ತ ಜನರ ಸಹಕಾರದೊಂದಿಗೆ ಇದನ್ನು ಪ್ರಾರಂಭಿಸುವುದೆಂದು ಆಡಳಿತ ಮಂಡಳಿಯು ಒಮ್ಮತದಿಂದ ತೀರ್ಮಾನಿಸಿತು. ತಾ.11-09-2011ರ ಭಾನುವಾರ ಅನಂತ ಚತುರ್ದಶಿಯ ದಿನ ಕ್ಷೇತ್ರದಲ್ಲಿ ''ಶ್ರೀ ಅನ್ನಪೂಣೇಶ್ವರೀ ಹೋಮ''ವನ್ನು ನಡೆಸಿ ತನ್ಮೂಲಕ ''ನಿತ್ಯಾನ್ನದಾನ''ವನ್ನು ಪ್ರಾರಂಭಿಸುವುದೆಂದು ನಿರ್ಧರಿಸಲಾಯಿತು.

ಅದರಂತೆ ಆ ದಿನ ಬೆಳಿಗ್ಗೆ 8 ಗಂಟೆಯಿಂದಲೇ ಹೋಮ ಪ್ರಾರಂಭವಾಯಿತು. ಆಸಕ್ತ ಎಲ್ಲ ಭಕ್ತರಿಗೂ ಸಂಕಲ್ಪ ಮಾಡಿಸಿ ಹೋಮದಲ್ಲಿ ಭಾಗವಹಿಸುವ ಅವಕಾಶ ಮಾಡಿಕೊಟ್ಟದ್ದರಿಂದ ಬಹಳಷ್ಟು ಭಕ್ತರು ಇದರ ಸದ್ವಿನಿಯೋಗವನ್ನು ಮಾಡಿಕೊಂಡು ಕೃತಾರ್ಥರಾದರು. ಮೊದಲಿಗೆ ಆಡಳಿತ ಮೊಕ್ತೇಸರರಾದ ಶ್ರೀ ಎಂ.ಶಶೀಂದ್ರ ಕುಮಾರ್ ದಂಪತಿಗಳು ಹೋಮದ ಆಹುತಿಯನ್ನು ಪ್ರಾರಂಭಿಸಿದರು. ಪಾಕಶಾಲೆಯಲ್ಲಿ ಸ್ಥಾಪಿಸಿದ್ದ ಅನ್ನದಪಲ್ಲದಿಂದ ಹೋಮಕ್ಕೆ ಬೇಕಾದ ಅನ್ನವನ್ನು ಕೊಂಡೊಯ್ಯಲಾಯಿತು. ಸುಮಾರು 12 ಗಂಟೆಯವರೆಗೂ ಹೋಮವು ಅನ್ನಪೂರ್ಣೇಶ್ವರಿ ಸ್ತೋತ್ರ ಮೂಲಕ ಮುಂದುವರೆದು ಭಕ್ತಿ ಶ್ರದ್ಧಾ ಪುರಸ್ಸರವಾಗಿ ಪೂರ್ಣಾಹುತಿಗೊಂಡಿತು. ಅಂತೆಯೇ ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಸೇವಾದಿಗಳು ಜರುಗಿ 10-30ಕ್ಕೆ ಸರ್ವಾಲಂಕಾರ ಪುರಸ್ಸರ ಮಹಾಪೂಜೆ ಯಾಯಿತು. ನಂತರ ದೇವರ ಬಲಿ ಹೊರಟು ನೂತನ ಪಾಕಶಾಲೆಗೆ, ಶ್ರೀದೇವರನ್ನು ಕರೆ ತರಲಾಯಿತು. ಅಲ್ಲಿ ಸ್ಥಾಪಿಸಿದ್ದ ನೂತನವಾದ ತೊಟ್ಟಿಲಿನಲ್ಲಿ ದೇವರನ್ನು ಕುಳ್ಳಿರಿಸಲಾಯಿತು ಮುಂಭಾಗದಲ್ಲಿ ಅನ್ನದ ರಾಶಿಯನ್ನು ಸ್ಥಾಪಿಸಿ ತನ್ಮೂಲಕ ''ಪಲ್ಲಪೂಜೆ''ಯನ್ನು ನೆರವೇರಿಸ ಲಾಯಿತು. ಪ್ರಸಾದರೂಪವಾಗಿ ಪಲ್ಲದಿಂದ ಮೊದಲಿಗೆ, ಶ್ರೀಕ್ಷೇತ್ರದ ಧರ್ಮದರ್ಶಿಗಳಾದ ಡಾ। ಯಾಜಿ ಎನ್.ನಿರಂಜನ

(4ನೇ ಪುಟಕ್ಕೆ...)




**ಕನ್ನಡ ಕಲಾಕೇಂದ್ರ, ಮುಂಬಯಿ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ**

**ಮತ್ತು ಶ್ರೀ ಶಂಕರ ಸೇವಾ ವೇದಿಕೆ, ಉಡುಪಿ**

ಇವರ ಸಂಯುಕ್ತ ಆಶ್ರಯದಲ್ಲಿ ಪ್ರಸ್ತುತಪಡಿಸುವ ಕನ್ನಡ ನಾಟಕ

**ಶ್ರೀ ಆದಿಶಂಕರಾಚಾರ್ಯ**

ರಚನೆ ಮತ್ತು ನಿರ್ದೇಶನ : ಬೈಲೂರು ಬಾಲಚಂದ್ರರಾವ್

ಪ್ರಸ್ತುತಿ : ಕನ್ನಡ ಕಲಾಕೇಂದ್ರ, ಮುಂಬಯಿ

**ಸೋಮವಾರ ತಾ.02-01-2012, ಸಂಜೆ 6-30ಕ್ಕೆ ಸ್ಥಳ : ಪಿ.ಪಿ.ಸಿ. ಆಡಿಟೋರಿಯಮ್, ಉಡುಪಿ**

ಉಚಿತ ಪ್ರವೇಶ - ಸರ್ವರಿಗೂ ಆದರದ ಸ್ವಾಗತ


# ಕುಕ್ಕಿಕಟ್ಟೆ : 'ಅನಿಕೇತನ'ದಲ್ಲಿ 'ಗೃಹಸಂಗೀತ'



ಇದೇ ನವಂಬರ್ 6ರ ಸಂಜೆ ಡಾ। ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ ಸುದರ್ಶನ ರಾವ್ ಇವರು ಉಡುಪಿ ಕುಕ್ಕಿಕಟ್ಟೆಯ ತಮ್ಮ ಮನೆ ಅನಿಕೇತನದಲ್ಲಿ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣರಾವ್‌ಜೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.), ಉಡುಪಿ ಇದರ ಆಶ್ರಯದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಡಾ। ವೈ. ಸುದರ್ಶನ್‌ರಾವ್ ಅವರು ಬಹುಸಂಖ್ಯೆಯಲ್ಲಿ ಆಗಮಿಸಿದ ಸಂಗೀತ ಪ್ರಿಯರನ್ನು ಮತ್ತು ಕಲಾವಿದರನ್ನು ಆತ್ಮೀಯತೆಯಿಂದ ಸ್ವಾಗತಿಸಿದರು.

ಪ್ರಬುದ್ಧ ಮಟ್ಟದ ಕಛೇರಿಯನ್ನು ನೀಡಿ ಶ್ರೋತೃಗಳನ್ನು ರಂಜಿಸಿದವರು ಉಡುಪಿಯ ಉತಮ ಯುವ ಕಲಾವಿದೆ ಶ್ರೀಮತಿ ರಂಜನಿ ಗುರುಪ್ರಸಾದ್. ಕೋದಂಡರಾಮ, ಮಾಜಾನಕಿ, ಹಿರಣ್ಮಯಿಂ ಲಕ್ಷ್ಮೀಂ, ಜಗದಾನಂದಕಾರಕ ಜಯ ಜಾನಕಿ ಪ್ರಾಣನಾಯಕ, ಉಡುಪಿಯ ಕೃಷ್ಣನ ಕಂಡು ಧನ್ಯನಾದೆ, ಹೂವ ತರುವರ ಮನೆಗೆ, ಈಶ್ವರ ನಿರುವನೋ ಮೊದಲಾದ ರಚನೆಗಳನ್ನು ಶ್ರೀಮತಿ ರಂಜನಿ ಗುರುಪ್ರಸಾದ್ ಅತ್ಯಂತ ಪರಿಣಾಮಕಾರಿಯಾಗಿ ಹಾಡಿ ಕೇಳುಗರಿಗೆ ಮುದ ನೀಡಿದರು. ಸಾಂಪ್ರದಾಯಿಕ ಮಂಗಳದೊಂದಿಗೆ ಸಂಗೀತ ಕಾರ್ಯಕ್ರಮವು ಸಂಪನ್ನಗೊಂಡಿತು.

ಈ ಕಛೇರಿಯಲ್ಲಿ ವಯಲಿನ್‌ನಲ್ಲಿ ಚೆನ್ನೈಯ ವಿ.ವಿ.ಶ್ರೀನಿವಾಸ ರಾವ್ ಮತ್ತು ಮೃದಂಗದಲ್ಲಿ ಚೆನ್ನೈ ಜೆ.ವೈದ್ಯನಾಥನ್ ಉತ್ತಮವಾಗಿ ಸ್ಪಂದಿಸಿ ಕಛೇರಿಯ ಯಶಸ್ಸಿಗೆ ಸಹಕರಿಸಿದರು.

ಶ್ರೀಮತಿ ವಸಂತಲಕ್ಷ್ಮಿ ಮತ್ತು ಶ್ರೀ ವಿ. ಅರವಿಂದ ಹೆಬ್ಬಾರ್ ಸಮಾರಂಭಕ್ಕೆ ಶುಭ ಕೋರಿದರು.

ಶ್ರೀಮತಿ ವಿದ್ಯಾ ಸುದರ್ಶನರಾವ್ ಅವರು ತಮ್ಮ ಮನೆಯ ಅಂಗಳದಲ್ಲಿ ನೆನಪಿನಂಗಳದಲ್ಲಿ ಬಹುಕಾಲ ಉಳಿಯುವಂತೆ ಕಾರ್ಯಕ್ರಮ ನೀಡಿದ ಕಲಾವಿದೆ ಕಲಾವಿದರಿಗೆ, ಆಸಕ್ತಿಯಿಂದ ಆಲಿಸಿ ಪ್ರೋತ್ಸಾಹಿಸಿದ ಶ್ರೋತೃಗಳಿಗೆ ಹಾಗೂ ಕಾರ್ಯಕ್ರಮದ ಒಟ್ಟು ಯಶಸ್ಸಿಗೆ ಸಹಕರಿಸಿದವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದ ಮೊದಲು ಎಲ್ಲರಿಗೂ ಉತ್ತಮ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಆ ದಿನ ಸಂಜೆ ಮಿಂಚು ಸಿಡಿಲಿನ ಆರ್ಭಟ ಮತ್ತು ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ ಕಾರ್ಯಕ್ರಮ ಪ್ರಾರಂಭವಾಗುತ್ತಿದ್ದಂತೆ ನಿಂತದ್ದು ನೋಡಿದರೆ ಅಪರೂಪದ ಸಂಗೀತ ಕಾರ್ಯಕ್ರಮದ ಸಂಪೂರ್ಣ ಯಶಸ್ಸಿಗೆ ಪ್ರಕೃತಿಯೇ ಸಹಕರಿಸಿದಂತೆ ಆಗಿತ್ತು.


**ಯುವ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ**

**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2012**

ತಾ.05-02-2012ನೇ ರವಿವಾರ ಮಣಿಪಾಲದ ಮಣಿಪಾಲ ಪದವಿಪೂರ್ವ ಕಾಲೇಜು ಗ್ರೌಂಡ್ (ಎಂ.ಜೆ.ಸಿ.)ನಲ್ಲಿ ನಡೆಯಲಿದೆ.

**ಆಸಕ್ತ ತಂಡಗಳು 15-01-2011ರೊಳಗೆ ಮೆನೇಜರ್ ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು (Ph : 0820-2520754), ದೇವದಾಸ್ ಶಾಸ್ತ್ರಿ ಆಳುಗ್ಗೇಲ್ ಹಿರಿಯಡ್ಕ (M : 9482046424), ಮಂಜುನಾಥ ಹೆಬ್ಬಾರ್, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ (M : 9448437893, 9611099894) ಇವರಲ್ಲಿ ತಮ್ಮ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.**

ವಿ.ಸೂ. : 1) ಪಂದ್ಯಾವಳಿಯು ಓವರ್ ಆರ್ಮ್, ಟೆನ್ನಿಸ್‌ಬಾಲ್, ನಿಗದಿತ ಓವರ್‌ಗಳಂತೆ ನಡೆಯುತ್ತದೆ. 2) ಪಂದ್ಯಾವಳಿಯು ನಮ್ಮ ಸಮಾಜ ಬಾಂಧವರಿಗೆ ಮಾತ್ರ ಸೀಮಿತವಾಗಿದೆ. 3) ತಂಡಗಳು ಪಂದ್ಯಾಟದ ದಿನ ಬೆಳಿಗ್ಗೆ 8-30ಕ್ಕೆ ಕ್ರೀಡಾಂಗಣದಲ್ಲಿ ಹಾಜರಿದ್ದು ಸಹಕರಿಸಬೇಕು. 4) ಅಲೆವೂರು ದಿ। ಭುಜಂಗ ರಾವ್ ಮತ್ತು ದಿ। ಶಾಂತಾ ದೇವಿ ಸ್ಮರಣಾರ್ಥ ಅವರ ಪುತ್ರ ಅಲೆವೂರು ಶ್ಯಾಮರಾವ್ ನೀಡಿದ ನಗದು ಬಹುಮಾನವನ್ನು ವಿಜೇತ ತಂಡಗಳಿಗೆ ವಿತರಿಸಲಾಗುವುದು.

ಇದೇ ದಿನ 10ನೇ ತರಗತಿಯವರೆಗಿನ ಮಕ್ಕಳಿಗೆ **ಜ್ಯೂನಿಯರ್ ಕ್ರಿಕೆಟ್ ಪಂದ್ಯಾಟ**ವೂ ನಡೆಯಲಿದೆ. ಆಸಕ್ತ ತಂಡಗಳು ಬೆಳಿಗ್ಗೆ 8-30ಕ್ಕೆ ಹಾಜರಿರಬೇಕಾಗಿ ಅಪೇಕ್ಷೆ.

**ಕ್ರಿಕೆಟ್ ಪಂದ್ಯಾಟಕ್ಕೆ ಪ್ರಾಯೋಜಕರಾಗಿ, ದಾನಿಗಳಾಗಿ ಹಾಗೂ ಬ್ಯಾನರ್ ಪ್ರದರ್ಶಿಸ ಬಯಸುವವರು ಶಾರದಾ ಮಂಟಪದ ಮ್ಯಾನೇಜರ್‌ರವರನ್ನು ಮುಂಚಿತವಾಗಿ ಸಂಪರ್ಕಿಸಬಹುದು.**

**- ಅಧ್ಯಕ್ಷರು ಮತ್ತು ಸಂಚಾಲಕರು, ಕ್ರೀಡಾ ವೇದಿಕೆ**

ತಾ.05-02-2012 ಬೆಳಿಗ್ಗೆ ಗಂಟೆ 9-00ರಿಂದ **ಮಹಿಳೆಯರು ಮತ್ತು ಮಕ್ಕಳಿಗಾಗಿ** ಶ್ರೀಶಾರದಾ ಮಂಟಪದಲ್ಲಿ

**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು** ಏರ್ಪಡಿಸಲಾಗಿದೆ.

**ಮಕ್ಕಳ ಮತ್ತು ಮಹಿಳಾ ವಿಭಾಗದ ಸ್ಪರ್ಧೆಗಳ ವಿವರ :** 1) 3-5 ವರ್ಷದೊಳಗಿನ ಮಕ್ಕಳಿಗೆ - **ಬಾತುಕೋಳಿ ನಡಿಗೆ, ಪಾಸಿಂಗ್ ದಿ ಬಾಲ್** 2) 1ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ - **ಒಂಟಿ ಕಾಲಿನ ಓಟ, ಮಣಿ ಹೆಕ್ಕುವುದು** 3) 4ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ - **ನೆನಪು ಶಕ್ತಿ, ಮಣಿ ಪೋಣಿಸುವುದು** 4) 7ರಿಂದ 10ನೇ ತರಗತಿ ವರೆಗಿನ ಮಕ್ಕಳಿಗೆ - **ಸ್ಕಿಪಿಂಗ್ (ಹಗ್ಗ ಅವರೇ ತರಬೇಕು), ಲಿಂಬೆಹಣ್ಣಿನ ಓಟ** 5) ಮಹಿಳೆಯರಿಗಾಗಿ - **ಸಂಗೀತ ಕುರ್ಚಿ, ಮೇಣದ ಬತ್ತಿ ಉರಿಸುವುದು.** 6) ಹಿರಿಯ ನಾಗರಿಕ ಮಹಿಳೆಯರಿಗಾಗಿ - **ತಲೆಯ ಮೇಲೆ ಪುಸ್ತಕ ಇಟ್ಟು ನಡೆಯುವುದು.** ಮಹಿಳೆಯರು ಮತ್ತು ಮಕ್ಕಳು ಆಸಕ್ತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಇದೇ ದಿನ ವಧುವರರ ಮಾಹಿತಿ ಸಂಗ್ರಹ ಕಾರ್ಯಕ್ರಮವನ್ನು ಮಹಿಳಾ ವೇದಿಕೆಯು ಆಯೋಜಿಸಿದೆ. ವಧೂವರರ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಈ ವೇದಿಕೆಯ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ಹೆಸರನ್ನು ನೋಂದಾಯಿಸುವವರು ವಧುವರರ ಭಾವಚಿತ್ರ, ಜಾತಕದ ಪ್ರತಿ, ಇತ್ಯಾದಿ ವಿವರಗಳನ್ನು ನೀಡಿ ವೇದಿಕೆಯಲ್ಲಿ ನೋಂದಾಯಿಸಬಹುದು. ಶ್ರೀಶಾರದಾ ಪತ್ರಿಕೆಯಲ್ಲಿ ವಧುವರರ ಮಾಹಿತಿಯನ್ನು ನೀಡಲು ಆಸಕ್ತಿಯುಳ್ಳವರು ಒಪ್ಪಿಗೆಯನ್ನು ನೀಡಬಹುದು.

- ಅಧ್ಯಕ್ಷರು ಮತ್ತು ಸಂಚಾಲಕರು, ಮಹಿಳಾ ವೇದಿಕೆ

# ಮಂಗಳಗೌರೀ ವ್ರತ ಕಥಾಸಾರ



- ವೈ. ಯಂ. ಶ್ರೀಧರ ರಾವ್
''ಸುದರ್ಶನ ನಿಲಯ'', ಆದಮಾರು.

(ಹಿಂದಿನ ಸಂಚಿಕೆಯಿಂದ)

ಅಂಥಹ ಶ್ರೇಷ್ಠವಾದ ಮಂಗಳ ಗೌರೀ ವ್ರತವನ್ನು ಮಾಡುವಾಗ ಯಾವ ಸ್ಥಳದಲ್ಲಿ ದೀಪಗಳನ್ನು ಇಟ್ಟು ಪ್ರಜ್ವಲಿಸುವರೋ ಆ ಸ್ಥಳದಲ್ಲಿರುವವರಿಗೆ ಸಕಲ ಸನ್ಮಂಗಲಗಳೂ ಉಂಟಾಗುವುವು'' ಎಂದು ಹೇಳುತ್ತಿರುವಾಗ್ಗೆ-ಅಲ್ಲಿ ಹತ್ತಿರದಲ್ಲಿಯೇ ಇದ್ದ ಶಿವನ ಸೋದರ ಮಾವನು-ಇದೆಲ್ಲವನ್ನೂ ಕೇಳಿಸಿ ಕೊಂಡವನಾಗಿ ಮನದಲ್ಲಿಯೇ ಇವಳು ನಮ್ಮ ಶಿವನಿಗೆ ತಕ್ಕ ವಧುವೆಂದು ಯೋಚಿಸಿ, ಹೇಗಾದರೂ ಮಾಡಿ ಆಕೆಯ ಮಾತಾ ಪಿತೃಗಳನ್ನು ಕಂಡು ಮಾತನಾಡಬೇಕೆಂದು ಆ ಹುಡುಗಿಯ ಹಿಂದೆಯೇ ಹೋಗಲು-ಅವಳ ಮನೆಯ ಹತ್ತಿರವಿದ್ದ ಒಂದು ದೇವಾಲಯದಲ್ಲಿ ಉಳಿದು ಕೊಂಡರು.

ಇತ್ತ ಸುಶೀಲೆಯ ತಂದೆಯಾದ ಹರಿಯು ತನ್ನ ಕುಲದೈವವಾದ ಈಶ್ವರನ ಅಪ್ಪಣೆಯಂತೆ ಮಗಳು ಪ್ರಾಪ್ತ ವಯಸ್ಕಳಾಗಲು ಅವಳಿಗೆ ವರನನ್ನು ಹುಡುಕ ಬೇಕೆಂದು ಯೋಚಿಸುತ್ತಿರುವಾಗ್ಗೆ ಅದೇ ರೀತಿ ಯೋಚನಾ ಮಗ್ನಳಾಗಿದ್ದ ಹರಿಯ ಹೆಂಡತಿಯು ಬೇರೆಯವರ ಮುಖಾಂತರ ವಿಷಯವನ್ನು ತಿಳಿದು ಕೊಂಡು ''ನಮ್ಮ ಮನೆಯ ಎದುರು ದೇವಸ್ಥಾನದಲ್ಲಿ ವಾಸವಾಗಿರುವ ವರನು ಅತ್ಯಂತ ಸುಂದರನೂ, ಯೋಗ್ಯನೂ ಆಗಿದ್ದಾನೆ. ವಿಚಾರಿಸೋಣ'' ಎಂದು ಹೇಳಲಾಗಿ-ಅವರಿಬ್ಬರೂ ಆತನ ಸೋದರ ಮಾವನನ್ನು ಕಂಡು ವಿವಾಹ ನಿಶ್ಚಯ ಮಾಡಿ ಕೊಂಡು-ವಿವಾಹದ ದಿನ ವರನಿಗೆ ಮಂಗಳ ಸ್ನಾನಾದಿಗಳನ್ನು ಮಾಡಿಸಿ, ಸಂಪ್ರದಾಯದಂತೆ ವಿವಾಹವನ್ನು ಮಾಡಿ, ಮಗಳೂ ಅಳಿಯನೂ ತಮ್ಮ ಮನೆಯಲ್ಲಿಯೇ ಇರುವಂತೆ ನೋಡಿಕೊಂಡರು.

ಹೀಗಿರುವಾಗ, ಒಂದು ದಿನ ಸುಶೀಲೆಯು ಶಿವನು ಮಲಗಿ ನಿದ್ರಿಸುತ್ತಿರುವಾಗ-ಮಂಗಳ ಗೌರಿಯು ಸುಶೀಲೆಯ ಸ್ವಪ್ನದಲ್ಲಿ ಬಂದು ''ಎಲೇ ಕುಮಾರಿಯೇ ಏಳು, ಎದ್ದೇಳು. ಮಲಗಿರಬೇಡ. ಇಗೋ ನಿನ್ನ ಗಂಡನನ್ನು ಕಚ್ಚಲು ಒಂದು ದೊಡ್ಡ ಸರ್ಪವು ಬರುತ್ತಿದೆ. ಆ ಹಾವಿನ ಮುಂದೆ ಒಂದು ಹಾಲಿನಿ ಬಟ್ಟಲನ್ನು ಇರಿಸು ಮತ್ತು ದೊಡ್ಡದಾದ ಒಂದು ಮಡಿಕೆಯನ್ನೂ ತಂದಿಡು. ಸರ್ಪವು ಹಾಲನ್ನು ಕುಡಿದು ಆ ಮಡಿಕೆಯೊಳಗೆ ಹೋದ ಮೇಲೆ ನಿನ್ನ ಮೈಮೇಲಿರುವ ಕುಪ್ಪಸವನ್ನು ಬಿಚ್ಚಿ ಆ ಗಡಿಗೆಯ ಮೂತಿಯನ್ನು ಬಿಗಿಯಾಗಿ ಕಟ್ಟಿ ಆ ನಂತರ ನಿದ್ರಿಸು'' ಎಂದು ಹೇಳಲು-ಸುಶೀಲೆಯು ದಿಗ್ಭ್ರಾಂತಳಾಗಿ ಎದ್ದು ನೋಡುವಲ್ಲಿ ತನ್ನೆದುರಿಗೇ ಬುಸುಗುಟ್ಟುತ್ತಾ, ಬರುತ್ತಿದ್ದ ಸರ್ಪವನ್ನು ನೋಡಿ, ಧೈರ್ಯದಿಂದ ಅದರ ಮುಂದೆ ಒಂದು ಹಾಲಿನ ಬಟ್ಟಲನ್ನು ತಂದಿಟ್ಟಳು ಮತ್ತು ಒಂದು ಗಡಿಗೆಯನ್ನೂ ಸಹ ಅದರ ಮುಂದೆ ತಂದಿಟ್ಟಳು. ಸರ್ಪವು ಹಾಲನ್ನು ಕುಡಿದು ಆ ಗಡಿಗೆಯೊಳಗೆ ಹೊಕ್ಕಾಗ, ಸುಶೀಲೆಯು ತನ್ನ ಕುಪ್ಪಸವನ್ನು ಬಿಚ್ಚಿ ಆ ಗಡಿಗೆಯ ಬಾಯಿಗೆ ಬಿಗಿಯಾಗಿ ಕಟ್ಟಿದಳು. ನಂತರ ತಾನು ಧೈರ್ಯವಾಗಿ ಮಲಗಿಕೊಂಡಳು. ಆಗ್ಗೆ ಶಿವನಿಗೆ ಎಚ್ಚರವಾಗಿ ಸುಶೀಲೆಯನ್ನು ಎಬ್ಬಿಸಿ, ''ನನಗೆ ಬಹಳ ಹಸಿವೆ ಆಗುತ್ತಿದೆ. ತಿನ್ನಲು ಏನನ್ನಾದರೂ ಕೊಡು'' ಎಂದು ಕೇಳಿದಾಗ-ಸುಶೀಲೆಯು ಮಂಗಳ ಗೌರಿ ನೈವೇದ್ಯಕ್ಕಾಗಿ ಮಾಡಿದ್ದ ಲಡ್ಡುಗಳನ್ನು ತಂದುಕೊಟ್ಟಳು. ಶಿವನು ಅದನ್ನು ತಿಂದು ನೀರು ಕುಡಿದು ಮಲಗಿಕೊಂಡನು. ನಂತರ ಅವನು ತನ್ನ ಕೈಯಲಿದ್ದ ಮುದ್ರೆಯುಂಗುರ ವನ್ನು ತೆಗೆದು ಗೌಪ್ಯವಾಗಿ ಅದನ್ನು ಮಲಗುವ ಮನೆಯಲ್ಲಿ ಇಟ್ಟು ಮಲಗಿಕೊಂಡನು.

ವಿಧಿವಶಾತ್ ಶಿವನು ಮತ್ತು ಆತನ ಸೋದರ ಮಾವ ಬೆಳಗಾಗುವುದರಲ್ಲಿಯೇ ಯಾರಿಗೂ ಹೇಳದೆ ಹೊರಟು ಹೋದರು. ಬೆಳಗಾದ ಮೇಲೆ ಸುಶೀಲೆಯು ತನ್ನ ಪತಿಯು ಇಲ್ಲದಿರುವುದನ್ನು ಕಂಡು ನಾಚಿಕೆಯಿಂದ ನಡೆದ ವಿಷಯವನ್ನೆಲ್ಲಾ ತನ್ನ ತಂದೆ ತಾಯಂದಿರಲ್ಲಿ ತಿಳುಹಿದಳು. ಮಾರನೇ ದಿನ ಇತ್ತ ಪರಮೇಶ್ವರನು ಶಿವನಂತೆ ವೇಷವನ್ನು ಹಾಕಿಕೊಂಡು ಬಂದಾಗ-ಶಿವನಿಗೂ ಇವನಿಗೂ ಯಾವ ವ್ಯತ್ಯಾಸವೂ ಇಲ್ಲದ ಕಾರಣ ಯಾರಿಗೂ ಅನುಮಾನ ಬರಲಿಲ್ಲ. ಅಷ್ಟು ಹೊತ್ತಿಗೆ ಸುಶೀಲೆಯು ಸ್ನಾನಾದಿಗಳನ್ನು ತೀರಿಸಿಕೊಂಡು ಮಂಗಳಗೌರೀ ವ್ರತವನ್ನು ಮಾಡಿ, ತನ್ನ ತಾಯಿಗೆ ಬಾಗಿನವನ್ನು ಕೊಟ್ಟಳು. ಅದನ್ನು ತೆಗೆದುಕೊಂಡು ನೋಡುವಾಗ್ಗೆ ಅದರಲ್ಲಿ ಒಂದು ಕಂಠೀಹಾರವಿದ್ದಿತ್ತು.



ತಾಯಿ ಅದನ್ನು ನೋಡಿ ಸಂತೋಷವಂತಳಾಗಿ ಅದನ್ನು ತನ್ನ ಮಗಳಿಗೆ ತೊಡಿಸಿದಳು ಮತ್ತು ಶಿವನೊಂದಿಗೆ ಸುಖವಾಗಿರುವಂತೆ ಪ್ರೇರೇಪಿಸಿ ದಾಗ, ತಾಯಿಯನ್ನು ಕುರಿತು ಸುಶೀಲೆಯು ''ಅಮ್ಮಾ ಈತನು ನಾನು ಮೊದಲು ಮದುವೆಯಾದ ವರನಲ್ಲಾ'' ಎಂದಾಗ - ಆ ಕೂಡಲೇ ವೇಷಧಾರಿ ಶಿವನು ಮಾಯವಾದನು. ಆ ಬಳಿಕ ಸುಶೀಲೆಯೂ ಆಕೆಯ ತಂದೆ ತಾಯಿ ಯರೂ ಚಿಂತಾಕ್ರಾಂತಳಾಗಿ ತಮ್ಮ ಅಳಿಯನ ಬರುವಿಕೆಗಾಗಿ ಒಂದು ಅನ್ನಛತ್ರವನ್ನು ಏರ್ಪಡಿಸಿದರು. ಪ್ರತಿದಿನವೂ ಬರುತ್ತಿದ್ದ ಹೊಸಬರಿಗೆ ಅನ್ನದಾನವನ್ನು ಸುಶೀಲೆಯ ಕೈಲಿ ಮಾಡಿಸುತ್ತಿದ್ದಂತೆ-ಕೆಲವು ದಿನಗಳ ನಂತರ ಯಾತ್ರೆಗಾಗಿ ಹೋಗಿದ್ದ ಶಿವನೂ ಸೋದರ ಮಾವನೂ ಕಾಶಿ ಕ್ಷೇತ್ರಕ್ಕೆ ಬಂದು, ಅಲ್ಲಿ ವಿಶ್ವೇಶ್ವರನ ದರ್ಶನ ಮಾಡಿ, ಅಲ್ಲಿಂದ ಹರಿದ್ವಾರಕ್ಕೆ ಬಂದು ಗಂಗಾಸ್ನಾನ ಮಾಡಿ, ದಾನ ಧರ್ಮಾಧಿಗಳನ್ನು ಮುಗಿಸಿ, ಬ್ರಾಹ್ಮಣರಿಂದ ಚಿರಂಜೀವಿಯಾಗು ಎಂಬ ಆಶೀರ್ವಾದವನ್ನು ಪಡೆದುಕೊಂಡು ತಮ್ಮೂರಿಗೆ ವಾಪಸ್ಸಾಗುವ ವೇಳೆ ದಾರಿಯಲ್ಲೊಂದು ದಿನ ಶಿವನು ಇದ್ದಕ್ಕಿದ್ದ ಹಾಗೇ 'ಹ' ಎಂದು ಕೂಗಿಕೊಂಡು ಮೂರ್ಛೆ ಹೋದನು. ಕೂಡಲೇ ಮಾವನು ತಾತ್ಕಾಲಿಕ ಶೈತ್ಯೋಪಚಾರ ಗಳನ್ನು ಮಾಡಿದ ಬಳಿಕ ಶಿವನು ಎಚ್ಚತ್ತು ''ಮಾವಾ, ನನ್ನನ್ನು ಯಮ ದೂತರು ಬಂದು ಎಳೆದುಕೊಂಡು ಹೋಗುತ್ತಿರುವಾಗ್ಗೆ ಮಂಗಳಗೌರಿಯು ಬಂದು, ಅವರೆಲ್ಲರನ್ನೂ ಹೊಡೆದೋಡಿಸಿ ನನಗೆ ಪ್ರಾಣ ದಾನ ಮಾಡಿದಳು. ನಂತರ ನನಗೆ ಎಚ್ಚರವಾಯ್ತು'' ಎಂದು ಹೇಳಲು-ಆಗ ಮಾವ ''ನಿನ್ನಲ್ಲಿ ನಡೆದ ವಿಚಾರವನ್ನು ಯಾರಿಗೂ ಹೇಳಬೇಡ'' ಎಂದು ಹೇಳಿ, ತಂದೆ ತಾಯಿಯರ ಜ್ಞಾಪಕ ಬಂದಾಗ-ಇನ್ನು ನಮ್ಮೂರಿಗೆ ಹೋಗೋಣ ಎಂದು ಹೇಳಿ ಪ್ರಯಾಣ ಮಾರ್ಗವಾಗಿ ಬರುತ್ತಾ ಪ್ರತಿಷ್ಠಾ ನಗರ ವನ್ನು ತಲುಪಿದರು.

ಅಲ್ಲಿ ಅನ್ನ ಛತ್ರವನ್ನು ನಡೆಸುತ್ತಿರುವುದನ್ನು ನೋಡಿ, ಇವರು ಹತ್ತಿರದಲ್ಲಿಯೇ ಸ್ವಯಂಪಾಕ ಮಾಡಿಕೊಳ್ಳತೊಡಗಿದರು. ಆಗ ಹರಿಯ ಸೇವಕರು ಬಂದು ಭಿನ್ನವಿಸಿಕೊಳ್ಳಲು-''ಅಯ್ಯಾ ನಾವು ಪರಾನ್ನವನ್ನು ಭುಂಜಿಸುವುದಿಲ್ಲ, ಸ್ವಯಂಪಾಕ ಮಾಡಿ ಭುಂಜಿಸುತ್ತೇವೆ'' ಎಂದು ಹೇಳಲು- ಸೇವಕರು ಹೋಗಿ ನಡೆದ ಸಮಾಚಾರ ವನ್ನು ಹರಿಗೆ ತಿಳಿಸಿದರು. ಹರಿಯು ಆಶ್ಚರ್ಯ ಭರಿತನಾಗಿ ಅವರನ್ನು ಮಂಗಳ ವಾದ್ಯಗಳ ಸಮೇತ ಮನೆಗೆ ಕರೆದುಕೊಂಡು ಬಂದು ಷೋಡಶೋ ಪಚಾರ ಗಳಿಂದ ಸುಶೀಲೆಯ ಕೈಯಲ್ಲಿ ಕಾಲನ್ನು ತೊಳೆಸುತ್ತಿರುವಾಗ-ಅವನ (ಶಿವನ) ರೂಪುರೇಖೆ ಗಳನ್ನು ಗುರುತಿಸಿ, ''ಇವನೇ ನನ್ನ ಗಂಡ''ನೆಂದು ತಾಯಿಗೆ ಹೇಳಿದಳು. ಈ ವಿಷಯವನ್ನು ಹೆಂಡತಿ ಯಿಂದ ತಿಳಿದ ಹರಿಯು ಅಳಿಯನನ್ನು ಕುರಿತು- ''ಈ ಮನೆಯಲ್ಲಿ 'ನೀನೇನಾದರೂ ವಸ್ತುವನ್ನು ಇಟ್ಟಿರುವೆಯಾ'' ಎಂದು ಕೇಳಲು ಶಿವನು ತಾನು ರಹಸ್ಯವಾಗಿ ಇಟ್ಟಿದ್ದ ಮುದ್ರೆಯುಂಗುರವನ್ನು ತಂದು ಕೊಟ್ಟನು.

ಆಗ ಎಲ್ಲರೂ ಸಂತೋಷಭರಿತರಾಗಿ ಅವರನ್ನು ಆದರಿಸಿ, ಮಗಳಿಗೆ ಬಳುವಳಿಯನ್ನು ಕೊಟ್ಟು ಶಿವನೊಡನೆ ಸುಶೀಲೆಯನ್ನೂ ಪ್ರಯಾಣ ಮಾಡಿಸಿದರು. ದಾರಿಯಲ್ಲಿ ಬರುತ್ತಿರುವಾಗ್ಗೆ ಆ ದಿನ ಶ್ರಾವಣ ಮಾಸದ ಮಂಗಳವಾರವಾದ ಕಾರಣ ಸುಶೀಲೆಯು ಶಾಸ್ತ್ರೋಕ್ತವಾಗಿ ಮಂಗಳಗೌರಿಯನ್ನು ಪೂಜಿಸಿದಳು. ನಂತರ ಅವರೆಲ್ಲರೂ ತಮ್ಮೂರಿನ ಕಡೆ ಪ್ರಯಾಣ ಮಾಡುತ್ತಿರುವಾಗ್ಗೆ ಒಂದು ಗೌರಿಯ ದೇವಸ್ಥಾನವು ಸಿಕ್ಕಿತು. ಅಲ್ಲಿ ಸುಶೀಲೆಯು ಭಕ್ತಿಯಿಂದ ಗೌರಿಯನ್ನು ಆರಾಧಿಸಿ, ಪ್ರಸಾದವನ್ನು ಸ್ವೀಕರಿಸಿ, ಮುಂದೆ ಪ್ರಯಾಣ ಮಾಡುತ್ತಾ, ಕುಂಡಲೀನಗರ (ತಮ್ಮ ಹುಟ್ಟೂರು)ದ ಸಮೀಪಕ್ಕೆ ಬರುತ್ತಿರುವಾಗ್ಗೆ ಊರಿನ ಜನರು ಇವರನ್ನು ನೋಡಿ ಸಂತೋಷಗೊಂಡು ಈ ಮೂವರನ್ನು ಇದಿರ್ಗೊಂಡರು. ಆಗ ಶಿವನೂ ಅವನ ಹೆಂಡತಿಯೂ ಶಿವನ ಸೋದರ ಮಾವನೊಂದಿಗೆ ಸೇರಿ ಮೂರು ಜನರೂ ಸಾಷ್ಟಾಂಗ ನಮಸ್ಕಾರ ಮಾಡಿದ ಬಳಿಕ-ಅತ್ತೆ, ಮಾವ ಇಬ್ಬರು ಸಹ ಸುಶೀಲೆಯನ್ನು ಕುರಿತು ''ಅಮ್ಮಾ ಪತಿ ವ್ರತೆ, ನೀನು ಯಾವ ವ್ರತವನ್ನು ಮಾಡಿದ ಕಾರಣ ನಮ್ಮ ಮಗನಿಗೆ ದೀರ್ಘಾಯು ಸ್ಸುಂಟಾಯಿತೋ ಆ ವ್ರತವನ್ನು ನಮಗೂ ಸಹ ತಿಳಿಸಬೇಕೆಂದು ಕೇಳಲಾಗಿ-ಸುಶೀಲೆಯು ''ಅಮ್ಮಾ ನಾನು ಯಾವ ವಿಧವಾದ ವ್ರತವನ್ನೂ ಕಂಡವಳಲ್ಲಾ, ನೀವೇ ಮಂಗಳಗೌರಿ; ನಿಮ್ಮ ಪತಿಯೇ ಪರಮೇಶ್ವರ-ನಿಮ್ಮಿಬ್ಬರ ಈ ಮಗನೇ ನನ್ನ ಪತಿ, ಈ ಮೂರು ಜನರ ಸೇವೆಯ ವಿನಹ ಬೇರೆ ಯಾವ ವ್ರತವೂ ನನಗೆ ತಿಳಿಯದು'' ಎಂದು ಹೇಳಿದಳು. ಹಾಗೆಯೇ ಅವರ ಸೇವೆಯನ್ನು ಬಹುಕಾಲ ಮಾಡಿ ಕೊಂಡಿದ್ದಳು.

ಹೀಗೆಂದು ಸಕಲಕಲಾ ಪ್ರವೀಣರಾದ ಸೂತ ಪುರಾಣಿಕರು ದ್ರೌಪದಿಗೆ ಹೇಳಿ-''ಎಲೌ ದ್ರೌಪದೀ ದೇವಿಯೇ! ಇಹದಲ್ಲಿ ಯಾರು ಈ ವ್ರತವನ್ನು ಮಾಡುತ್ತಾರೆಯೋ ಅವರು ಸಕಲ ಸಂಪತ್ತನ್ನೂ, ದೀರ್ಘಸೌಮಂಗಲ್ಯವನ್ನೂ ಪಡೆದು ಪುತ್ರ ಪೌತ್ರಾದಿಗಳನ್ನು ಪಡೆದು ಸುಖವಾಗಿರುತ್ತಾರೆ'' ಎಂದು ಹೇಳಿದರು, ಎಂಬಲ್ಲಿಗೆ ಮಂಗಳಗೌರಿ ವ್ರತ ಕಥೆಯು ಸಂಪೂರ್ಣವಾಯ್ತು.

**ಅಥ ಉದ್ಯಾಪನಾವಿಧಿ :**

ಈ ವ್ರತವನ್ನು ಪ್ರಾರಂಭ ಮಾಡಿದ ಐದನೆಯ ವರ್ಷದಲ್ಲಿ ಶ್ರಾವಣ ಮಾಸದ ಕಡೆಯ ಮಂಗಳವಾರ ದಿನ ಪ್ರಾತಃ ಕಾಲ ಮಂಗಳಗೌರಿ ಯನ್ನು ಪೂಜಿಸಿ, ಆಚಾರ್ಯನನ್ನು ಸ್ವಗೃಹಕ್ಕೆ ಕರೆಸಿ, ಲಿಂಗತೋ ಭದ್ರವೆಂಬ ಮಂಟಪವನ್ನು ನಿರ್ಮಿಸಿ, ಅದರಲ್ಲಿ ಕಲಶಗಳನ್ನು ಸ್ಥಾಪಿಸಿ, ಉಮಾ ಮಹೇಶ್ವರ ಪ್ರತಿಮೆಯನ್ನು ಅದರ ಮೇಲಿಟ್ಟು - ಅನಂತ, ಬ್ರಹ್ಮ, ಗಣಪತಿ, ಕುಮಾರ, ಶಚೀ ಪುರಂದರ-ಈ ಐದು ದೇವತೆಗಳಿಗೆ ಪ್ರತ್ಯೇಕ ಕಲಶಗಳನ್ನಿಟ್ಟು ಪೂಜಿಸುವುದು. (ಲಕ್ಷ್ಮೀನಾರಾಯಣ, ಸಾವಿತ್ರಿ, ನವಗ್ರಹಗಳು ಹಾಗೂ ಇತರ ಎಲ್ಲಾ ದೇವತೆಗಳನ್ನು ಆವಾಹಿಸುವುದಕ್ಕೆ ಒಂದೊಂದು ಕಲಶವನ್ನು ಸ್ಥಾಪಿಸಬೇಕು. ಅಷ್ಟು ಕಲಶಗಳನ್ನು ಸ್ಥಾಪಿಸಲು ಶಕ್ತಿ ಇಲ್ಲದಿದ್ದರೆ-ಕಡೆಗೆ ಐದು ಕಲಶವನ್ನಾದರೂ ಇಡತಕ್ಕದ್ದು)

ಮಂಗಳಗೌರಿಯೇ ಈ ವ್ರತಕ್ಕೆ ಪ್ರಧಾನ ದೇವತೆಯಾದ ಕಾರಣ-ರಾತ್ರಿ ನಾಲ್ಕು ಯಾಮಗಳಲ್ಲಿ ವಿಧಿವತ್ತಾಗಿ ವ್ರತವನ್ನು ಮಾಡಿ ಪೂಜಿಸುತ್ತಾ, ನಿರಾಹಾರಿಯಾಗಿ ನಿಯಮ ದಿಂದಿರುತ್ತಾ ತನ್ನ ಶಾಖಾನುಸಾರವಾಹಿನಿರುವ ದೇವತೆಗಳ ಮಂತ್ರಗಳನ್ನು ಪಠಿಸುತ್ತಾ-ಅರಳೀ, ಆಜ್ಯ, ದೂರ್ವ, ಪಾಯಸ, ಜೀರಿಗೆ, ಬೆಲ್ಲಗಳಿಂದ ಆಹುತಿಯನ್ನು ಕೊಟ್ಟು ''ಸರ್ವಮಂಗಳ ಮಾಂಗಲ್ಯೆ'' ಎಂಬ ಮಂತ್ರವನ್ನು ಹೇಳಿಕೊಂಡು, ಹೋಮ ಮಾಡಿ, ಪೂರ್ಣಾಹುತಿಯನ್ನು ಮುಗಿಸಿ, ನಂತರ 16 ಸುಮಂಗಲಿಯರನ್ನು ಕರೆದು ಸುಮಂಗಲೀ ಪೂಜೆಯನ್ನು ಮಾಡಿ, 'ಉದ್ದೀಪಸ್ಯ' ಎಂಬ ಮಂತ್ರವನ್ನು ಹೇಳಿಕೊಂಡು ಧ್ಯಾನ ಮಾಡಬೇಕು. ಆಮೇಲೆ ದಂಪತಿ ಪೂಜೆಯನ್ನು ಮಾಡಿಸಿ, ಬ್ರಾಹ್ಮಣ ಸುವಾಸಿನಿಯರ ಸಮಾರಾಧನೆ ಯನ್ನು ಮಾಡಿ, ಭೂರಿ ದಕ್ಷಿಣೆಗಳಿಂದ ತೃಪ್ತಿ ಪಡಿಸಿದರೆ ಈ ವ್ರತವು ಸಂಪೂರ್ಣವಾಗುವುದು.

ಈ ರೀತಿ ಮಾಡುವುದರಿಂದ ಸಕಲ ಭೋಗ ಭಾಗ್ಯ, ಸಕಲ ಸಂಪತ್ತು, ಸೌಮಂಗಲ್ಯಾಭಿವೃದ್ಧಿ ಯನ್ನು ಪಡೆಯುತ್ತಾರೆಂಬಲ್ಲಿಗೆ-ಮಂಗಳಗೌರಿ ಉದ್ಯಾಪನಾ ವಿಧಿಯು ಸಂಪೂರ್ಣವಾಗುವುದು.

(...ಮುಗಿಯಿತು)

## ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಅನ್ನಪೂರ್ಣೇಶ್ವರಿ ಹೋಮ ಸಹಿತ-ನಿತ್ಯಾನ್ನದಾನ ಪ್ರಾರಂಭ

(...3ನೇ ಪುಟದಿಂದ)

ಭಟ್ಟರಿಗೆ, ನಂತರ ಕ್ಷೇತ್ರದ ಪ್ರಧಾನ ಬಾಣಸಿಗರಾದ ಶ್ರೀ ಮುರಲೀಧರ ಎಂ.ಇವರಿಗೆ ಅನ್ನಪ್ರಸಾದವನ್ನು ವಿತರಿಸಲಾಯಿತು. ನಂತರ ನಡೆದ ಮಹಾ ಅನ್ನಸಂತರ್ಪಣೆಯಲ್ಲಿ ನಿರೀಕ್ಷೆಗಿಂತಲೂ ದುಪ್ಪಟ್ಟು ಜನರು ಭಾಗವಹಿಸಿ ಶ್ರೀದೇವರ ಅನ್ನಪ್ರಸಾದವನ್ನು ಸ್ವೀಕರಿಸಿದರು. ಅಂದಿನಿಂದ ಪ್ರತಿದಿನ ಮಧ್ಯಾಹ್ನ 1 ಗಂಟೆಯಿಂದ 3 ಗಂಟೆಯವರೆಗೆ ಬಂದ ಭಕ್ತರಿಗೆ ನಿತ್ಯಾನ್ನದಾನವು ನೆರವೇರುತ್ತಿದ್ದು ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ಅನ್ನದ ಮೂಲಕ ಜ್ಞಾನವನ್ನು ಪಡೆಯುವ ಈ ಕಾರ್ಯದಲ್ಲಿ ಕೃತಾರ್ಥರಾಗುತ್ತಿದ್ದಾರೆ.

**ಶ್ರೀಕ್ಷೇತ್ರದಲ್ಲಿ ಶರನ್ನವರಾತ್ರಿ-ಚಂಡಿಕಾಹೋಮ**

ಇತ್ತೀಚಿನ ಆರು ವರ್ಷದಲ್ಲಿ ಅನೂಚಾನವಾಗಿ ನೆರವೇರಿದಂತೆ, ಕ್ಷೇತ್ರದಲ್ಲಿ ಶ್ರೀ ಶ್ರೀ ಜಗದ್ಗುರು ಗಳಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀಶಾರದಾ ಸನ್ನಿಧಿಯಲ್ಲಿ ಈ ವರ್ಷವೂ ಶರನ್ನವರಾತ್ರಿ ಉತ್ಸವವು ವಿಜೃಂಭಣೆಯಿಂದ ನೆರವೇರಿತು. ಪ್ರತಿದಿನವೂ ಶ್ರೀಶಾರದಾ ಸನ್ನಿಧಿಯಲ್ಲಿ ದುರ್ಗಾನಮಸ್ಕಾರ ಹಾಗೂ ಚಂಡಿಕಾಹೋಮಗಳು ಭಕ್ತ ಜನರ ಸೇವಾರ್ಥವಾಗಿ ನೆರವೇರಿತು. ಪ್ರತಿದಿನ ಸುಮಾರು 300-350 ಜನ ನಿತ್ಯಾನ್ನದಾನದಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

ಚಂಡಿಕಾಹೋಮದ ಪ್ರಯುಕ್ತ ನವರಾತ್ರಿಗೆ 4-5 ದಿನಗಳ ಮೊದಲೇ ಶ್ರೀಕ್ಷೇತ್ರದಲ್ಲಿ ಪಾಠ ಶಾಲೆಯ ವಿದ್ಯಾರ್ಥಿಗಳು, ಅರ್ಚಕ ವರ್ಗವಲ್ಲದೆ ಆಸಕ್ತ ಭಕ್ತರ ಸಹಕಾರದೊಂದಿಗೆ, ಸಪ್ತಶತೀ ಪಾರಾಯಣವನ್ನು ನಡೆಸಲಾಗಿ ಸುಮಾರು 200ಕ್ಕೂ ಮಿಕ್ಕಿ ಪಾರಾಯಣವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮ ವಿಜಯದಶಮಿಯವರೆಗೂ ಮುಂದುವರಿಯಿತು.

ವರದಿ : **ಷಣ್ಮುಖಪ್ರಿಯ, ಪಾವಂಜೆ**

## ಶ್ರೀಶಾರದಾ ಪತ್ರಿಕೆಗೆ ಅಭಿನಂದನೆಗಳು


**ಪ್ರತಿಕ್ರಿಯೆ**

''ಜೀವಮಾನ ರಂಗ ಸಾಧನೆ'' ಪ್ರಶಸ್ತಿ ವಿಜೇತ ಶ್ರೀ ಬೈಲೂರು ಬಾಲಚಂದ್ರರಾವ್‌ರವರ ಬಗ್ಗೆ ಅಕ್ಟೋಬರ್ 2011ರ ಶ್ರೀಶಾರದಾ ಪತ್ರಿಕೆಯಲ್ಲಿ ಮೂಡಿ ಬಂದ ವರದಿ ಓದಿ ತುಂಬಾ ಸಂತೋಷ ವಾಯ್ತು. ಪ್ರಶಸ್ತಿಯ ಹೆಸರಿಗೆ ಅನ್ವರ್ಥವಾಗಿ ತಮ್ಮ ಜೀವಮಾನದ 60 ವರ್ಷಗಳಿಂದ ನಾಟಕ ರಂಗ ದಲ್ಲಿ ಹಾಸುಹೊಕ್ಕಾಗಿ ತಮ್ಮನ್ನು ರೂಪಿಸಿಕೊಂಡ ಶ್ರೀಬಾಲಚಂದ್ರರಾಯರು ಈಗ ತುಂಬಿದ ಕೊಡ. ಕರ್ನಾಟಕ ನಾಟಕ ಅಕಾಡೆಮಿಯಿಂದ ಶ್ರೀಬಾಲ ಚಂದ್ರರಾಯರಿಗೆ ಸಿಕ್ಕಿದ ಪ್ರಶಸ್ತಿ ನಮ್ಮ ಸಮಾಜಕ್ಕೆ ಸಿಕ್ಕಿದ ಗೌರವದ ಕಾಣಿಕೆ ಎಂದೇ ಹೇಳಬಹುದು. ಪಾದರಸದಂತಿರುವ ಶ್ರೀ ಬಾಲಚಂದ್ರರಾಯರು ನಮ್ಮ ಸಮಾಜದ ಯುವ ಪೀಳಿಗೆಗೆ ಮಾದರಿ ಯಾಗಿದ್ದಾರೆ.

ಅಂತೆಯೇ ''ಕಾರ್ಕಳದ ಕನ್ನಡಿಗನಿಗೆ ಕೊಚ್ಚಿಯ ಕೊಡುಗೆ'' ಎಂಬ ವರದಿ ತುಂಬಾ ಕುತೂಹಲ ಮೂಡಿಸುವಂತಿತ್ತು. ನಮ್ಮ ಸಮಾಜದ ಹೆಮ್ಮೆಯ ಪುತ್ರ ಲೆಫ್ಟಿನೆಂಟ್ ಕಮಾಂಡರ್ ಅಶ್ವಿನ್ ಎಮ್.ರಾವ್ ಕೊಚ್ಚಿನ್ ನೌಕಾಪಡೆಯ ಐ.ಎನ್.ಎಸ್. ಗರುಡದಲ್ಲಿರುವ ಚಾಲಕರಹಿತ ವಿಮಾನ (UAV) ಸ್ಕ್ವಾಡ್ರನ್‌ನಲ್ಲಿ ತಾಂತ್ರಿಕ ತಂಡದ ಮೇಲಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ವಿಷಯ ತಿಳಿಯಿತು. ಎಲೆಯ ಮರೆಯ ಕಾಯಿಯಂತಿರುವ ಅಶ್ವಿನ್ ಎಮ್.ರಾವ್‌ರವರ ಸಾಧನೆಗಳು ರೋಮಾಂಚಕವಾಗಿದೆ.

**ಶಂಕರನಾರಾಯಣರಾವ್, ಕರ್ವಾಲ್**
**ಹೊಸವಿಳಾಸ : ಫ್ಲಾಟ್‌ನಂ.D-301, D-ಬ್ಲಾಕ್, ETA ಗಾರ್ಡನ್ ಅಪಾರ್ಟ್‌ಮೆಂಟ್ಸ್, ಮಾಗಡಿ ರೋಡ್, ಬೆಂಗಳೂರು-560023.**
**ಮೊಬೈಲ್ : 9449958151, 9342828168**

# ಧರ್ಮವ್ಯಾಧನೆಂಬ ಅಂತ್ಯಜನ ಕತೆ



- ವೈ. ಶಂಕರನಾರಾಯಣ ರಾವ್,
ಪಡುಬಿದ್ರಿ

ಆರ್ಷೇಯ ಯುಗದಲ್ಲಿ ಬ್ರಾಹ್ಮಣರು ವೇದಪಾಠಿಗಳಾಗಿ ಬ್ರಹ್ಮ ಜ್ಞಾನ, ಆತ್ಮಜ್ಞಾನಗಳನ್ನು ಪಡೆದು ಸಮಾಜವನ್ನು ಮುನ್ನಡೆಸುವ ಭೂಸುರರೆನಿಸಿಕೊಂಡಿದ್ದರು. ಆದರೆ ಪ್ರತಿಭೆ, ಆತ್ಮಜ್ಞಾನ, ಬ್ರಹ್ಮಜ್ಞಾನ, ಧರ್ಮ ಪ್ರವೃತ್ತಿಗಳು ಯಾವುದೇ ಒಂದು ವರ್ಣ, ಜಾತಿಗೆ ಸೀಮಿತವಾದ ಸೊತ್ತು ಆಗಿರದೆ ಎಲ್ಲಾ ವರ್ಗಗಳ ಸಾಧಕರಲ್ಲಿಯೂ ಇರತಕ್ಕದ್ದಾಗಿವೆಯೆಂಬುದು ಸಾರ್ವಕಾಲಿಕ ಸತ್ಯ. ಬಹುಮಾನ್ಯರಾಗಿದ್ದ ದ್ವಿಜರು ಬ್ರಹ್ಮಜ್ಞಾನ-ಆತ್ಮಜ್ಞಾನ, ಧರ್ಮಸೂಕ್ಷ್ಮಗಳನ್ನು ಅರಿಯಲು ನೀಚಕುಲದವರನ್ನೂ ಆಶ್ರಯಿಸಿದ ಪ್ರಸಂಗಗಳು ಪುರಾಣಗಳಲ್ಲಿ ಅಲ್ಲಲ್ಲಿ ಸಿಗುತ್ತವೆ. ಶ್ರೀ ಆದಿಶಂಕರಾಚಾರ್ಯರಲ್ಲಿದ್ದ ಮೌಢ್ಯವನ್ನು ತೊಲಗಿಸಿ ಅವರಲ್ಲಿ ಅದ್ವೈತ ತತ್ವವನ್ನು ಉದ್ದೀಪನಗೊಳಿಸಲು ಗಂಗಾತಟದಲ್ಲಿ ಕಾಶೀ ವಿಶ್ವನಾಥನೇ ಚಾಂಡಾಲನ ರೂಪದಲ್ಲಿ ಕಾಣಿಸಿಕೊಂಡ ಪ್ರಸಂಗವನ್ನು ನಾವು ಇಲ್ಲಿ ಸ್ಮರಿಸಬಹುದು. ಮಾರ್ಕಂಡೇಯ ಋಷಿಗಳು ಧರ್ಮರಾಯನಿಗೆ ಹೇಳಿದರೆನ್ನಲಾದ ''ಧರ್ಮವ್ಯಾಧ''ನೆಂಬ ಅಂತ್ಯಜ (ಹೀನ ಕುಲದವ)ನ ಈ ಕತೆಯನ್ನು ಮಹಾಭಾರತದ ಅರಣ್ಯಪರ್ವದಿಂದ ಆಯ್ದುಕೊಳ್ಳಲಾಗಿದೆ.

ಒಂದಾನೊಂದು ಕಾಲದಲ್ಲಿ ಒಂದೂರಿನಲ್ಲಿ ಮುದ್ಗಲ್ಯವಂಶ ಸಂಜಾತನಾದ ಕೌಶಿಕನೆಂಬ ಬ್ರಾಹ್ಮಣನೊಬ್ಬನಿದ್ದನು. ಅವನು ಅಖಂಡ ಬ್ರಹ್ಮಚರ್ಯವನ್ನು ಪರಿಪಾಲಿಸುತ್ತಾ ವೇದಾಧ್ಯಯನಪರನೂ, ವಿದ್ಯಾಭ್ಯಾಸನಿರತನೂ ಆದ ಶ್ರೇಷ್ಠ ವಿಪ್ರನೆನಿಸಿಕೊಂಡಿದ್ದನು. ಒಂದು ದಿನ ಅವನು ವಿಶಾಲ ವೃಕ್ಷವೊಂದರ ಕೆಳಗೆ ಕುಳಿತು ವೇದ ಪಠಣಗೈಯುತ್ತಿರುವ ವೇಳೆ ಪಕ್ಷಿಯೊಂದು ಮರದ ರೆಂಬೆಗಳ ಮೇಲೆ ಅತ್ತಿಂದಿತ್ತ ಸಂಚರಿಸುತ್ತಾ ಅವನ ಮೇಲೆ ಮಲ ವಿಸರ್ಜಿಸಿತು. ರೋಷಾವಿಷ್ಟನಾದ ವಿಪ್ರನು ಮರದ ಮೇಲಿದ್ದ ಪಕ್ಷಿಯನ್ನು ಕೆಂಗಣ್ಣಿನಿಂದ ದುರುದುರನೆ ನೋಡಿದಾಗ ಅದರ ರೆಕ್ಕೆ ಪುಕ್ಕಗಳು ಸೀದು ಹೋಗಿ ದೇಹವು ಬೆಂದು ಅವನ ಎದುರಿಗೇ ನೆಲದ ಮೇಲೆ ಬಿದ್ದು ಸಾವನಪ್ಪಿಕೊಂಡಿತು. ತನ್ನೊಳಗೆ ಹುದುಗಿಕೊಂಡಿದ್ದ ಶಕ್ತಿ ವಿಶೇಷವನ್ನು ಮನಗಂಡವನಾದ ಬ್ರಾಹ್ಮಣನು ಮದಭರಿತನಾದನು.

ನಂತರ ಅವನು ದಿನನಿತ್ಯದ ಭಿಕ್ಷಾಟನೆಗಾಗಿ ಬ್ರಾಹ್ಮಣರ ಅಗ್ರಹಾರಕ್ಕೆ ಬಂದು ಮನೆಯೊಂದರ ಮುಂದೆ ನಿಂತು ಭಿಕ್ಷೆಯನ್ನು ಯಾಚಿಸಿದನು. ಆ ಮನೆಯ ಯಜಮಾನನು ಆಗ ತಾನೇ ಮನೆಗೆ ಬಂದಿದ್ದನು. ಪತಿಪರಾಯಣೆಯಾದ ಆ ಮನೆಯ ಸಾಧ್ವಿಯು ಸ್ವಲ್ಪ ನಿಂತರೆ ಭಿಕ್ಷೆಯನ್ನು ತರುವೆನೆಂದು ವಿಪ್ರನಿಗೆ ತಿಳಿಸಿ ಒಳಗೆ ಹೋಗಿ ಪತಿಸೇವೆಯನ್ನು ಮೊದಲು ಮಾಡಿ ಮುಗಿಸಿದಳು. ಸ್ವಲ್ಪ ತಡೆದು ಭಿಕ್ಷೆಯನ್ನು ತಂದು ಒಪ್ಪಿಸುವಾಗ ದ್ವಿಜನು ಸಿಟ್ಟಿನಿಂದ ಅವಳನ್ನು ದುರುದುರನೆ ನೋಡಿದನು. ಆಗ ಆ ಪತಿವ್ರತೆಯು ''ಅಯ್ಯಾ ಬ್ರಾಹ್ಮಣನೇ, ನೀನು ಹಾಗೆ ದುರುಗುಟ್ಟಿ ನನ್ನನ್ನು ನೋಡಿದಾಗ ಸುಟ್ಟು ಹೋಗಲು ನಾನು ಮರದ ಮೇಲಿನ ಪಕ್ಷಿ ಅಲ್ಲ'' ಎಂದು ಮೂದಲಿಸಿದಳು.

ಆಶ್ಚರ್ಯಚಕಿತನಾದ ಆ ದ್ವಿಜನು ''ಈ ಸಂಗತಿ ನಿನಗೆ ಹೇಗೆ ತಿಳಿಯಿತು? ಎಂದು ಅವಳನ್ನೇ ಕೇಳಿದನು. ''ಪತಿಸೇವೆಯೇ ನನಗೆ ಪರಮಧರ್ಮ. ನಾನು ಪತಿ ಪರಿಚರ್ಯೆಯನ್ನು ಮಾಡಿಕೊಂಡು ಪತಿವ್ರತಾಧರ್ಮವನ್ನು ಪರಿಪಾಲಿಸುತ್ತಿರುವುದರಿಂದ ನನಗೆ ಈ ವಿಶೇಷ ಶಕ್ತಿಯು ಲಭಿಸಿದೆ. ನೀನು ವ್ಯರ್ಥ ಕಾರ್ಯಗಳನ್ನು ಮಾಡುತ್ತಾ ಧರ್ಮ ರಹಸ್ಯಗಳನ್ನು ಅರಿಯುವ ಗೋಜಿಗೆ ಹೋಗದೆ ವೃಥಾ ಕೋಪಿಷ್ಟನಾಗಿರುವೆ. ಇಲ್ಲಿಂದ ನಾಲ್ಕೈದು ಯೋಜನ ದೂರದಲ್ಲಿರುವ ಮಿಥಿಲಾ ನಗರದಲ್ಲಿ ಧರ್ಮವ್ಯಾಧನೆಂಬ ಧರ್ಮಜ್ಞಾನಿಯೊಬ್ಬನಿರುವನು. ಅವನು ಧರ್ಮ ಅಧರ್ಮಗಳ ಸೂಕ್ಷ್ಮಗಳನ್ನು ನಿನಗೆ ವಿಸ್ತರಿಸಿ ಹೇಳಬಲ್ಲನು. ನೀನು ಅವನನ್ನು ಕಂಡರೆ ನಿನ್ನ ಮನದ ತಾಮಸವು ಕರಗಿ ನೀನು ಜ್ಞಾನಿಯಾಗುವೆ'' ಎಂದು ಅವಳು ಉತ್ತರಿಸಿದಳು.

ಅನಂತರ ಆ ಭೂಸುರನು ಮಿಥಿಲಾ ನಗರದತ್ತ ಮಯಣಿಸಿದನು. ಬಲು ಆಯಾಸ, ಹಸಿವುಗಳಿಂದ ಬಳಲಿದವನಾಗಿ ಜನರಿಂದ ಗಿಜಿಗುಟ್ಟುವ ನಗರದ ಬೀದಿಗಳಲ್ಲಿ ಅಲೆದಾಡಿದನು. ಕೊನೆಗೆ ಪತಿವ್ರತೆಯು ಕೊಟ್ಟ ಸುಳಿವುಗಳಿಂದ ಆ ನಗರದ ಕೊನೆಯಲ್ಲಿದ್ದ ಪುಳಿಂದರ (ಬೇಡರ/ಕಟುಕರ) ಕೇರಿಗೆ ಕಾಲಿಟ್ಟನು. ತೊಗಲನ್ನು ಸುಲಿಸಿಕೊಂಡು ಕೊಬ್ಬು, ನೆಣಗಳಿಂದ ಆವರಿಸಲ್ಪಟ್ಟ ಪ್ರಾಣಿಗಳ ಮಾಂಸ ಖಂಡಗಳನ್ನು ಎದುರಿಗೆ ತೂಗು ಹಾಕಿದ್ದ ಮಾಂಸದಂಗಡಿಯನ್ನು ಅವನು ಕಂಡನು. ಅಂಗಡಿಯ ಒಂದೆಡೆಯಲ್ಲಿ ಪ್ರಾಣಿಗಳ ಹೃದಯ, ಕರುಳು, ಗುಲ್ಮಯಕೃತ್ತು, ಮೆದುಳು ಮೊದಲಾದ ಅಂಗಗಳನ್ನು ಪೇರಿಸಿಟ್ಟ ಬುಟ್ಟಿಗಳ ಸಾಲು ಇತ್ತು. ಇನ್ನೊಂದೆಡೆ ರಕ್ತವನ್ನು ಸಂಗ್ರಹಿಸಿಟ್ಟಿದ್ದ ಮಡಕೆಗಳು ಇದ್ದವು. ಕಡಿದ ಕುರಿಗಳ ತಲೆಗಳ ರಾಶಿ ಮೂಲೆಯಲ್ಲಿದ್ದಿತ್ತು. ಎಲುಬುಗಳ ರಾಶಿ ಇನ್ನೊಂದು ಮೂಲೆಯಲ್ಲಿತ್ತು. ಮೀನುಗಳನ್ನು ಹಗ್ಗದಲ್ಲಿ ಪೋಣಿಸಿ ತೋರಣದಂತೆ ಎದುರಿಗೆ ಕಟ್ಟಿದ್ದರು. ಅಗ್ಗಿಷ್ಟಿಕೆಯಲ್ಲಿ ಮಾಂಸದ ಖಾದ್ಯಗಳನ್ನು ಬೇಯಿಸುತ್ತಿದ್ದರು. ಒಟ್ಟಾರೆಯಾಗಿ ಆ ಮಾಂಸದಂಗಡಿಯ ನೋಟ ಬೀಭತ್ಸವಾಗಿತ್ತು.

ವಿಪ್ರನು ದೂರದಲ್ಲಿ ಬರುತ್ತಿರುವುದನ್ನು ಕಂಡು ಆ ಅಂಗಡಿಯ ಯಜಮಾನನಾದ ಧರ್ಮವ್ಯಾಧನು ಅವನನ್ನು ಇದಿರುಗೊಂಡು ಸ್ವಾಗತಿಸಿದನು. ''ಪೂಜ್ಯರು ದಯ ಮಾಡಿಸಬೇಕು. ನಿಮ್ಮನ್ನು ಆ ಪತಿವ್ರತೆಯು ನನ್ನಲ್ಲಿಗೆ ಕಳುಹಿಸಿರುವಳಲ್ಲವೇ? ಅವಳಿಗೆ ನನ್ನಲ್ಲಿ ಬೇಸರವಿಲ್ಲ ತಾನೇ? ನಮ್ಮ ಕಟುಕರ ಕೇರಿ ಭೂಸುರರಾದ ತಾವು ಸಂಚರಿಸುವಷ್ಟು ಯೋಗ್ಯವಲ್ಲ. ಆದರೂ ತಾವು ಅನ್ಯಥಾ ಭಾವಿಸದೆ ನನ್ನ ಆಲಯಕ್ಕೆ ಬಂದು ನನ್ನ ಆತಿಥ್ಯಗಳನ್ನು ಸ್ವೀಕರಿಸಬೇಕು'' ಎಂದು ವಿನೀತನಾಗಿ ನುಡಿದು ಅವನನ್ನು ತನ್ನ ಮನೆಗೆ ಕರೆದೊಯ್ದು ಉಚಿತ ಆಸನವನ್ನಿತ್ತು ಹಾಲು-ಹಣ್ಣುಗಳಿಂದ ಸತ್ಕರಿಸಿದನು.

ಅಲ್ಲಿ ಚಾವಡಿಯಲ್ಲಿ ಮಂಚದ ಮೇಲೆ ನರೆತ ಕೂದಲಿನ, ನಡುಗುವ ತಲೆಯ, ಸುಕ್ಕುಗಟ್ಟಿದ ಮೈಯ, ಬಾಗಿದ ಶರೀರದ ಒಳ ಚಾಚಿದ ಗಂಟಲಿನ, ದಟ್ಟವಾದ ಹುಬ್ಬುಗಳ, ತೊದಲುವ ಮಾತುಗಳ ಮಂದದೃಷ್ಟಿಯ ವೃದ್ಧ ದಂಪತಿಗಳು ಒರಗಿಕೊಂಡಿದ್ದರು. ಬೇಡನು ವಿಪ್ರನೊಡನೆ ''ಇವರೇ ನನ್ನ ಮಾತಾಪಿತರು. ಅಲ್ಲಿ ಬಾಗಿಲ ಬಳಿ ನಿಂತಿರುವ ಯುವತಿ ನನ್ನ ಮಡದಿ. ಅವಳ ಬಳಿ ನಿಂತಿರುವವನು ನನ್ನ ಮಗನು. ನಾನು ಅಡವಿಗೆ ಹೋಗಿ ಬಿಲ್ಲು-ಬಾಣಗಳಿಂದ ಪ್ರಾಣಿಗಳ ಬೇಟೆಯಾಡುವೆನು. ಅವುಗಳ ಮಾಂಸವನ್ನು ಅಂಗಡಿಯಲ್ಲಿಟ್ಟು ನ್ಯಾಯವಾದ ಬೆಲೆಗೆ ಮಾರುವೆನು. ನನ್ನ ಈ ಕಷ್ಟಾರ್ಜಿತದ ಧನದಿಂದ ಈ ಆಶ್ರಿತರನ್ನು ಸಲಹುವೆನು. ನನ್ನ ಮಾತಾ ಪಿತೃಗಳ ಪರಿಚರ್ಯವನ್ನು ದಿನನಿತ್ಯವೂ ತಪ್ಪದೆ ಶ್ರದ್ಧೆಯಿಂದ ಮಾಡುವೆನು. ಇದರಲ್ಲಿ ಕಪಟ, ವಂಚನೆ, ರಾಗಾದಿ ದೋಷಗಳನ್ನು ಮಾಡೆನು'' ಎಂದು ಹೇಳಿದನು.

ಧರ್ಮವ್ಯಾಧನು ಧರ್ಮರಹಸ್ಯಗಳನ್ನು ವಿವರಿಸುತ್ತಾ ಹೀಗೆಂದು ಬ್ರಾಹ್ಮಣನಿಗೆ ಬೋಧಿಸಿದನು :-

''ವಿಪ್ರನೇ, ಬೇಡರಾದ ನಾವು ಪ್ರಾಣಿಗಳನ್ನು ಕೊಲ್ಲುವೆವು ಎಂಬ ಮಾತ್ರಕ್ಕೆ ನಾವು ಹಿಂಸಾಪ್ರಿಯರಲ್ಲ. ನಮ್ಮ ಹೆತ್ತವರನ್ನು, ನಮ್ಮ ಆಶ್ರಿತರನ್ನು ಸಲಹುವುದಕ್ಕಾಗಿ ಮಾತ್ರ ನಾವು ನಮ್ಮ ಕುಲಧರ್ಮವಾದ ಮಾಂಸ ವಿಕ್ರಯವನ್ನು ಮಾಡುವೆವು. ಕುಲಧರ್ಮವನ್ನು ತ್ಯಜಿಸಿ ಪರಕೀಯ ಧರ್ಮವನ್ನು ಸ್ವೀಕರಿಸಿದವನಿಗೆ ಘೋರ ಕುಂಭೀಪಾಕದ ಶಿಕ್ಷೆ ತಪ್ಪದು.''

''ಬ್ರಾಹ್ಮಣನೇ, ವ್ಯರ್ಥ ಮಾತನಾಡುವುದು, ಅನ್ಯರ ಧನವನ್ನು ಅಪಹರಿಸುವುದು, ಪರರಲ್ಲಿ ದ್ವೇಷ ಭಾವನೆ ಇಟ್ಟುಕೊಳ್ಳುವುದು, ಸ್ವಾರ್ಥಕ್ಕಾಗಿ ಧನಾಢ್ಯರನ್ನು ವಂದಿ-ಮಾಗದರಂತೆ ಸ್ತುತಿಸುವುದು, ಪರಸ್ತ್ರೀಯರನ್ನು ಮೋಹಿಸಿ ಅತ್ಯಾಚಾರಕ್ಕೆಳಸುವುದು, ಬಕ ವೃತ್ತಿಯಿಂದ ಸಾಧು ಪುರುಷನಂತೆ ಸೋಗು ಹಾಕಿ ಮೋಸ ಮಾಡುವುದು, ಅನ್ಯರ ಆಸ್ತಿ-ಪಾಸ್ತಿಗಳನ್ನು ನಾಶ ಮಾಡುವುದು, ಡಂಭಾಚಾರ, ಹಿಂಸೆಗಿಳಿಯುವುದು, ಇವೆಲ್ಲವೂ ನಾವು ಅನುಸರಿಸಬೇಕಾದ ಧರ್ಮಕರ್ಮಗಳಿಗೆ ಹಾನಿ ತರುವಂತವುಗಳು, ದೋಷ ಕಾರಕಗಳು.''



''ಭೂಸುರನೇ, ಸಾಂಗವಾದ ವೇದಾಧ್ಯಯನ, ಸಜ್ಜನರ ಸಂಗ, ಶಾಸ್ತ್ರ ಶ್ರವಣ, ಭೋಗೇಚ್ಛೆ ಇಲ್ಲದಿರುವುದು, ಯಜ್ಞ-ಯಾಗ ಧ್ಯಾನಗಳಲ್ಲಿ ತೊಡಗುವಿಕೆ, ಸದಾಚಾರಿಯಾಗಿರುವುದು, ಮಂಗಲಕಾರಕವಾದ ಕರ್ಮಗಳಲ್ಲಿ ತೊಡಗುವುದು, ಪರಾಂಗನೆಯರಲ್ಲಿ ಸುಖಕ್ಕೆಳಸದೆ ಧರ್ಮಪತ್ನಿಯಲ್ಲಿ ಸಂಗ ಸುಖವನ್ನು ಪಡೆಯುವುದು ಇವೆಲ್ಲವೂ ಸದ್ಧರ್ಮ ಗತಿಯಾಗಿದೆ.

''ದ್ವಿಜೋತ್ತಮನೇ, ಧನಮದವನ್ನು ಸತ್ಕುಲ ಪ್ರಸೂತನೆಂಬ ಮದವನ್ನು, ಯೌವನದ ಮದವನ್ನು, ವಿದ್ಯಾ ಮದವನ್ನು, ತನ್ನನ್ನು ಸುತ್ತುವರಿದಿರುವ ಬೆಂಬಲಿಗರು ಇರುವರೆಂಬ ಮದವನ್ನು, ವೈಭವದ ಮದವನ್ನು, ತಾನು ಆಚಾರವಂತನೆಂಬ ಮದವನ್ನು, ಅಧ್ಯಯನದಿಂದಲೂ, ಸಜ್ಜನರಿಂದ ಪಡೆಯುವ ಬೋಧನೆಗಳ ಮೂಲಕವೂ, ಅನವರತ ಚಿಂತನ-ಮನನಗಳಿಂದಲೂ ಹತ್ತಿಕ್ಕಿ ವಿದ್ಯಾವಿನಯ ಸಂಪನ್ನನಾಗಿ ಸಜ್ಜನನಾಗಿ ಬಾಳಿ ಬದುಕಬೇಕು''

''ಬ್ರಾಹ್ಮಣ ಶ್ರೇಷ್ಠನೇ, ನೀನು ಉತ್ತಮ ಕುಲದಲ್ಲಿ ಜನಿಸಿದವನು. ನಾವು ಜಾತಿ ವಿಹೀನರು. ಆದರೆ ನಾವು ಧರ್ಮಾಚರಣೆಯನ್ನು ಭಾವ ಶುದ್ಧಿಯಿಂದ ಮಾಡುವೆವು. ನಮ್ಮ ಧರ್ಮಾಚರಣೆಯಲ್ಲಿ ಯಾವುದೇ ಊನವೂ ಇಲ್ಲ; ಲೋಪವೂ ಇಲ್ಲ. ಬ್ರಾಹ್ಮಣರ, ದೈವ-ದೇವತೆಗಳ, ಕುಲ ಗುರುಗಳ ಸೇವೆಯನ್ನು ನಾವು ಸಂಭಾವಿತರಾಗಿ ಕಪಟವಿಲ್ಲದೆ ಮಾಡುವೆವು. ನೀನು ನಮ್ಮನ್ನು ನೋಡಿ ಇವೆಲ್ಲವುಗಳನ್ನೂ ಕಲಿತು ಆಚರಿಸುತ್ತಿರು''

-ಮುಂತಾದ ಹಿತವಚನಗಳಿಂದ ಆ ಬ್ರಾಹ್ಮಣನಿಗೆ ಧರ್ಮರಹಸ್ಯಗಳನ್ನು ಉಪದೇಶಿಸಿ ಬೀಳ್ಕೊಂಡನು. ತನ್ನೂರಿಗೆ ಬಂದ ಕೌಶಿಕನು ತನ್ನ ವೃದ್ಧ ಮಾತಾಪಿತೃಗಳ ಸೇವಾಸಕ್ತನಾಗಿ, ಧರ್ಮಪರಾಯಣನಾಗಿ ಲೋಕಜ್ಞಾನಿಯೆನಿಸಿಕೊಂಡನು. □


RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

Krishna Rao
Ph :2520652
Mob. :9902029048

KISHAN
Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

PRAMOD
AUTOMOBILES
KARANGALPADY, MANGALORE -575 003.
30 Years of Service
Ph :2493633 (O)
2493633 (H.O.)
2212723 (R)
Mobile :9448260225
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಇದು ದ್ವೇಷಪೂರಿತ ತೀರ್ಮಾನವೆಂಬುದರಲ್ಲಿ ಸಂದೇಹವೇನೂ ಇಲ್ಲ. ಅಹಿಚ್ಛತ್ರ ಬ್ರಾಹ್ಮಣರು (ತೌಳವ ಬ್ರಾಹ್ಮಣರು?) ತುಳುನಾಡಿನಲ್ಲಿ, ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರು ಬ್ರಾಹ್ಮಣ ಸಮಾಜದಲ್ಲಿ ಬಹುಸಂಖ್ಯಾತಕರಾಗಿರುವರು. ಈ ಅಹಿಚ್ಛತ್ರ ಬ್ರಾಹ್ಮಣರಲ್ಲಿ ಅವರವರು ಬಂದು ನೆಲೆಸಿದ ಸ್ಥಳಕ್ಕನುಸಾರವಾಗಿ ಹೆಸರುಗಳನ್ನು ಆಂತು ಬೇರೆ ಬೇರೆ ವರ್ಗಗಳು ಅಸ್ತಿತ್ವಕ್ಕೆ ಬಂದುವು. ಉದಾಹರಣೆಗಳಿಂದ ಈ ವಿಷಯ ಮನನವಾಗಬಲ್ಲದು.

1) ಶಿವಳ್ಳಿ ಬ್ರಾಹ್ಮಣರು; ಉಡುಪಿ ತಾಲೂಕಿನ ಶಿವಳ್ಳಿ ಗ್ರಾಮದಲ್ಲಿ ವಾಸಿಸುವವರು. ಮತ್ತು ಅಲ್ಲಿಂದ ಇತರ ಕಡೆಗಳಿಗೆ ಹೊರಟು ಹೋದವರು (ಶಿವನ ಹಳ್ಳಿ, ಶಿವಳ್ಳಿ)

2) ಕೋಟ ಬ್ರಾಹ್ಮಣರು: ಉಡುಪಿ ತಾಲೂಕಿನ ಕೋಟವೆಂಬ ಗ್ರಾಮದಲ್ಲಿ ನೆಲೆನಿಂತವರು ಮತ್ತು ಅಲ್ಲಿಂದ ಇತರ ಕಡೆಗೆ ಹೋಗಿ ವಸಾಹತು ನಿಂತವರು (ಈ ಕೋಟ ಬ್ರಾಹ್ಮಣರು ತಮ್ಮ ಕಾರ್ಯಕ್ಷೇತ್ರವು 'ಕೋಟ ಮಹಾಜಗತ್ತು' ಎಂದು ಖ್ಯಾತಿ ಪಡೆದಿತ್ತೆಂದು ಹೇಳುತ್ತಾರೆ)

3) ಕೋಟೇಶ್ವರ ಬ್ರಾಹ್ಮಣರು; ಕುಂದಾಪುರ ತಾಲೂಕಿನ ಕೋಟೇಶ್ವರವೆಂಬ ಗ್ರಾಮದಲ್ಲಿ ವಾಸಿಸುವವರು (ಸಹ್ಯಾದ್ರಿಯಲ್ಲಿ ಇವರನ್ನು ಪತಿತ ಬ್ರಾಹ್ಮಣರಾಗಿ ಖಂಡನೆ ಮಾಡಿದೆ)

4) ಕಂದಾವರ ಬ್ರಾಹ್ಮಣರು; ಕುಂದಾಪುರ ತಾಲೂಕಿನ ಕಂದಾವರ ಎಂಬಲ್ಲಿ ವಾಸಿಸಿದ ಬ್ರಾಹ್ಮಣ ವರ್ಗ. ಈ ಬ್ರಾಹ್ಮಣರೆಲ್ಲ ವಿಶ್ವಾಮಿತ್ರ ಗೋತ್ರಕ್ಕೆ ಸೇರಿದ್ದು ಉಡುಪರೆಂಬ ಕೌಟುಂಬಿಕ ಹೆಸರನ್ನು ಧರಿಸಿಕೊಳ್ಳುತ್ತಾರೆ.

5) ಪಂಚಗ್ರಾಮದ ಬ್ರಾಹ್ಮಣರು; ಹಳ್ಳಿಹೊಳೆ, ಅಜ್ರಿ, ಹೊಸಂಗಡಿ, ಉಳ್ಳೂರು ಮತ್ತು ಸಿದ್ದಾಪುರ ಗ್ರಾಮವಾಸಿಗಳು (ಇವರು ಪಾತಿತ್ರ್ಯವನ್ನು ಹೊಂದಿದವರೆಂದು ಸಹ್ಯಾದ್ರಿಯಲ್ಲಿ ನಿಷೇಧಿಸಲ್ಪಟ್ಟಿದ್ದಾರೆ.)

ಈ ವಿವಿಧ ಬ್ರಾಹ್ಮಣ ವಿಭಾಗಗಳು ಪ್ರಥಮದಲ್ಲಿ ವಿರಳವಾಗಿದ್ದು, ಸಮಯ ಹೋದಂತೆ ಬ್ರಾಹ್ಮಣೇತರ ಸೇರ್ಪಡೆಯಿಂದ ಅಧಿಕ್ಯವನ್ನು ಹೊಂದಿ, ಅದರ ಪರಿಣಾಮವಾಗಿ ಉತ್ತಮ, ಮಧ್ಯಮ, ಮತ್ತು ಅಧಮ ವರ್ಗಗಳೆಂಬ ಭಾವನೆ ಮೂಡಿದಂತೆ ಕಂಡು ಬರುತ್ತದೆ. ಇದರ ವಿಮರ್ಶೆ ಇಲ್ಲಿ ಅಗತ್ಯವಾಗಿದೆ.

ಶಿವಳ್ಳಿ, ಕೋಟ, ಕೋಟೇಶ್ವರ, ಕಂದಾವರ, ಪಂಚಗ್ರಾಮ ಇತ್ಯಾದಿ ಊರುಗಳ ಹೆಸರುಗಳನ್ನು ತಮ್ಮ ಜಾತಿವಾಚಕವಾಗಿ ಮಾಡಿಕೊಂಡುದು ಆಯಾ ಸಮಾಜದವರೇ ವಿನಾ, ಆಗಿನ ಊರಿನ ಜನರು ಆರಂಭದಲ್ಲಿ ಈ ರೀತಿಯಲ್ಲಿ ಅವರನ್ನು ಸಂಭೋದಿಸಲಿಲ್ಲವೆಂಬುದನ್ನು ಗ್ರಾಮಪದ್ಧತಿಯಿಂದ ತಿಳಿಯಬಹುದು. ಮಾತ್ರವಲ್ಲದೆ ಅವರಲ್ಲಿರುವ ಬೇರೆ ಬೇರೆ ಕುಲಗಳ ಹೆಸರುಗಳನ್ನು ಪರಿಶೀಲಿಸಿದರೆ, ತಾವೇ ತಮ್ಮ ಜಾತಿಯ ಹೆಸರುಗಳನ್ನು ಇಟ್ಟುಕೊಂಡದ್ದು ಎಂಬುದನ್ನು ತಿಳಿಯಲು ಕಷ್ಟವಾಗಲಾರದು. ಒಂದು ಸಮಾಜದವರು ತಮ್ಮ ತವರೂರಿನಿಂದ ಇನ್ನೊಂದು ದೇಶಕ್ಕೆ ವಸಾಹತು ಮಾಡಲು ಹೋದರೆ ತಮ್ಮ ಮಾತೃದೇಶವನ್ನು ಯಾ ಭಾಷೆಯನ್ನು ಸೂಚಿಸುವ ಜಾತಿ ಹೆಸರನ್ನು ತಮ್ಮ ಪಂಗಡಕ್ಕೆ ಇಟ್ಟುಕೊಳ್ಳುವುದಲ್ಲದೆ, ತಾವು ನೆಲೆನಿಂತ ದೇಶದ ಯಾ ಪ್ರದೇಶದ ಒಂದು ಗ್ರಾಮ ಯಾ ಊರನ್ನು ತಮ್ಮ ಜಾತಿ ಯಾ ಕುಲವಾಚಕವಾಗಿ ಮಾಡಿಕೊಂಡಿದ್ದು ಚರಿತ್ರೆಯಲ್ಲಿ ಕಂಡುಬರುವುದು ವಿರಳ.

ಲೋಕರೂಢಿಯು ಹೀಗಿರುವಾಗ ಅಹಿಚ್ಛತ್ರದಿಂದ ಬಂದಿರುವ ಬ್ರಾಹ್ಮಣರು ಈ ರೂಢಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದಕ್ಕೆ ಬಲವಾದ ಕಾರಣಗಳಿರಬೇಕೆಂದೇ ಕೆಲವರ ಅಭಿಪ್ರಾಯ. ಈ ಪಂಗಡದವರು ತಾವು ಬಂದು ನೆಲೆನಿಂತ ದೇಶದ ಯಾ ಊರುಗಳ ಹೆಸರುಗಳನ್ನು, ಪದ್ಧತಿಗೆ ವ್ಯತಿರಿಕ್ತವಾಗಿ, ತಮ್ಮ ಜಾತಿ ವಾಚಕವಾಗಿ ಮಾಡಿಕೊಂಡಿದ್ದರಲ್ಲದೆ, ವೈದಿಕ ಧರ್ಮಕ್ಕೆ ಅವಶ್ಯಕವಾದ ವಿಶಿಷ್ಟ ಗ್ರಂಥಗಳನ್ನು ಕನ್ನಡ ಮಾತನಾಡುವ ಭಾಗಗಳಲ್ಲಿ ನೆಲೆನಿಂತವರೂ ಸಹ 'ತುಳುಲಿಪಿ' ಎಂದು ನಾಮಕರಣ ಹೊಂದಿದ, ಒಂದು ವಿಶಿಷ್ಟತೆಯುಳ್ಳ ಲಿಪಿಯಲ್ಲಿ ಬರೆದಿರಿಸಿದರು ಎಂದೂ, ಇದು ಗುಪ್ತ ಲಿಪಿಯಾಗಿದ್ದು, ಅವರು ಬರೆದಿರಿಸಿದ ಗ್ರಂಥಗಳನ್ನು ಇತರರಿಗೆ ಓದಿ ತಿಳಕೊಳ್ಳಲು ಅಸಾಧ್ಯವಾಯಿತೆಂದೂ, ಇತರರು ಈ ಗ್ರಂಥಗಳ ವಸ್ತು ವಿಷಯಗಳನ್ನು ತಿಳಿದುಕೊಳ್ಳದಂತೆ ಮಾಡಿದ ಪ್ರಯತ್ನವಿದೆಂದೂ, ಇದಕ್ಕೆ ಬಲವಾದ ಕಾರಣಗಳಿರಬೇಕೆಂದೂ, ಇದೊಂದು ಚಮತ್ಕಾರದ ಕೆಲಸವೆಂದೂ, ಕೆಲವರು ಟೀಕಿಸಿ, ವಾದಿಸುವುದೂ ಇದೆ. 'ತುಳು ಲಿಪಿ'ಗೆ ಸಂಬಂಧಿಸಿದ ಸಮಸ್ಯೆಯನ್ನು ಈ ರೀತಿಯಲ್ಲಿ ಬಗೆಹರಿಸಬಹುದು.

ಹಿಂದಿನ ಕಾಲದಿಂದಲೂ (ಎಂದರೆ ಸಾಧಾರಣ ಹನ್ನೊಂದು, ಹನ್ನೆರಡನೆ ಶತಮಾನದಿಂದಲೂ) ತುಳುನಾಡಿನ ಬ್ರಾಹ್ಮಣರ (ಇಲ್ಲಿ ಹೈಗವನ್ನೂ ಸೇರಿಸಿಕೊಳ್ಳಬೇಕು) ಕುಟುಂಬಗಳ ಯಜಮಾನರು ಕೇರಳಕ್ಕೆ ತಂತ್ರಸಾರ, ಮಂತ್ರವಾದ, ವೈದಿಕ ಕ್ರಮಗಳನ್ನು ಅಭ್ಯಾಸಮಾಡಲು ಹೋಗುತ್ತಿದ್ದರು. ಅವರು ತಾವು ಕಲಿತ ವಿದ್ಯಾಸಾರವನ್ನು ಹಾಗೂ ಜ್ಞಾನವನ್ನು ಮಲೆಯಾಳದ ಒಂದು ಪ್ರಭೇದವಾದ ಲಿಪಿಯಲ್ಲಿ ಬರೆಯುತ್ತಿದ್ದರು. ತುಳುನಾಡಿನ ಬ್ರಾಹ್ಮಣರು ಈ ಲಿಪಿಯನ್ನು ಉಪಯೋಗಿಸುತ್ತಿದ್ದ ಕಾರಣ ಮಾತ್ರದಿಂದ ಇದಕ್ಕೆ 'ತುಳುಲಿಪಿ' ಎಂಬ ನಾಮಕರಣವಾಯಿತು. ಈ ಲಿಪಿಯು ಎರಡು ಮೂರು ಅಕ್ಷರಗಳ ಹೊರತಾಗಿ ಮಲೆಯಾಳ ಲಿಪಿಯಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ತುಳುಭಾಷೆಗೆ ಸ್ವತಂತ್ರವಾದ ಲಿಪಿ ಇಲ್ಲವೆಂಬುದು ನಿರ್ವಿವಾದ.

(ಮುಂದುವರಿಯುವುದು)

'ತುಳುನಾಡಿನಲ್ಲಿ ಬ್ರಾಹ್ಮಣ್ಯ' ಈ ಪುಸ್ತಕ ಇಲ್ಲಿ ಲಭ್ಯ :
ಡಾ। ಪಾದೂರು ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ್ (ರಿ.), #10-2-87B1, ಮೊದಲನೆಯ ಮಹಡಿ, ಎಸ್.ಎಮ್.ಎಸ್.ಪಿ. ಸಂಕೀರ್ಣ, ಸಂಸ್ಕೃತ ಕಾಲೇಜ್ ಬಳಿ, ಉಡುಪಿ-576101, ಕರ್ನಾಟಕ

# ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ)

ಶಂಕರರ ಜನ್ಮಭೂಮಿಯಾದ ಕಾಲಟಿಯ ಆದಿಶಂಕರ ಟ್ರಸ್ಟ್ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ಶ್ರೀಶಂಕರ ಕಾಲೇಜಿನ ಆಡಳಿತವನ್ನು 1960ರಲ್ಲಿ ತನ್ನ ವಶಕ್ಕೆ ತೆಗೆದುಕೊಂಡಿತು. ಶ್ರೀಶಾರದಾ ಪೀಠದ ಸಂರಕ್ಷಣೆಯಲ್ಲಿ ಮುನ್ನಡೆಯುತ್ತಿರುವ ಈ ಕಾಲೇಜಿನಲ್ಲಿ ಈಗ ಸುಮಾರು 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅನೇಕ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಡಾಕ್ಟೊರಲ್ ಸಂಶೋಧನೆ ನಡೆಸಲೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಶಾಂಕರ ಸಿದ್ಧಾಂತವನ್ನು ಕುರಿತು ಸ್ನಾತಕೋತ್ತರ ಹಾಗೂ ಸಂಶೋಧನೆಯ ಹಂತದ ಅಧ್ಯಯನಕ್ಕೆ ವಿಶೇಷ ಮಹತ್ವ ನೀಡಲಾಗಿದೆ. ಈ ಕಾಲೇಜು ಕೇರಳದ ಕೊಟ್ಟಾಯಂನಲ್ಲಿರುವ ಮಹಾತ್ಮಾಗಾಂಧಿ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಿದೆ. ವಿಶ್ವವಿದ್ಯಾನಿಲಯಧನಸಹಾಯ ಆಯೋಗ (ಯು.ಜಿ.ಸಿ.)ದ ರಾಷ್ಟ್ರೀಯ ಮೌಲ್ಯಮಾಪನ ಸಮಿತಿಯವರು ಈ ಕಾಲೇಜನ್ನು ಸಂದರ್ಶಿಸಿ, ಅಲ್ಲಿನ ಎಲ್ಲ ಶೈಕ್ಷಣಿಕ ಚಟುವಟಿಕೆಗಳ ಮೌಲ್ಯಮಾಪನ ಮಾಡಿ, ನಾಲ್ಕು ತಾರಾ ಮಾನ್ಯತೆ ನೀಡಿರುವುದು ಅಭಿಮಾನದ ಸಂಗತಿಯಾಗಿದೆ. ಈ ಕಾಲೇಜಿನ ಭವ್ಯವಾದ ಕಟ್ಟಡದಲ್ಲಿನ ಜಗದ್ಗುರು ಚಂದ್ರಶೇಖರ ಭಾರತಿ ಸೆಮಿನಾರ್ ಹಾಲ್, ಶ್ರೀ ಅಭಿನವ ವಿದ್ಯಾತೀರ್ಥ ಲೈಬ್ರೆರಿ ಮತ್ತು ಶ್ರೀ ಭಾರತೀತೀರ್ಥ ಸಭಾಂಗಣಗಳು ಶಿಕ್ಷಣ ಪ್ರೇಮಿಗಳ ಗಮನ ಸೆಳೆಯುತ್ತವೆ.

ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಆಶೀರ್ವಾದದೊಂದಿಗೆ 2001ರಲ್ಲಿ ಸ್ಥಾಪಿಸಲಾದ ಕಾಲಟಿಯ ಶ್ರೀ ಆದಿಶಂಕರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ತಾಂತ್ರಿಕ ಶಿಕ್ಷಣದ ಜತೆ ವಿದ್ಯಾರ್ಥಿಗಳಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಅರಿವನ್ನು ಮೂಡಿಸುತ್ತಿದೆ. ಹಾಗಾಗಿ ಇಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಜಗತ್ತಿನಾದ್ಯಂತ ಮಾನ್ಯತೆ ಇದೆ. ಆದ್ದರಿಂದಲೇ 'ಹೊಸ ಪೀಳಿಗೆಯ ವಿನೂತನ ಎಂಜಿನಿಯರಿಂಗ್ ಕಾಲೇಜು' ಎಂಬ ಗೌರವಕ್ಕೆ ಈ ಸಂಸ್ಥೆ ಪಾತ್ರವಾಗಿದೆ. ಇಲ್ಲಿನ ಶಂಕರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಎರಡು ವರ್ಷದ ಎಂ.ಬಿ.ಎ. ಪದವಿ ತರಗತಿಗಳನ್ನು ನಡೆಸುತ್ತಿದೆ. ಮಾನವೀಯ ಸಂಪನ್ಮೂಲ ನಿರ್ವಹಣೆಯಂತಹ ಹೊಸ ವಿಷಯಗಳ ಕಲಿಕೆಗೆ ಇಲ್ಲಿ ಅವಕಾಶ ಒದಗಿಸಲಾಗಿದೆ. ಈ ಎರಡೂ ಕಾಲೇಜುಗಳಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳನ್ನು ದೇಶ- ವಿದೇಶಗಳ ಕೆಲವು ಪ್ರತಿಷ್ಠಿತ ಸಂಸ್ಥೆಗಳವರು ಕಾಲೇಜಿಗೆ ಬಂದು ಸಂದರ್ಶನ ನಡೆಸಿ, ಉದ್ಯೋಗಾವಕಾಶಗಳನ್ನು ಒದಗಿಸುತ್ತಿದ್ದಾರೆ. 2005-06ರಲ್ಲಿ ಸ್ಥಾಪನೆಗೊಂಡ ಆದಿಶಂಕರ ಟ್ರೈನಿಂಗ್ ಕಾಲೇಜು ಭವಿಷ್ಯದ ಶಿಕ್ಷಕರನ್ನು ಸಜ್ಜುಗೊಳಿಸುವ ಒಂದು ಶಿಕ್ಷಣ ಮಹಾವಿದ್ಯಾಲಯ. ತತ್ತ್ವಶಾಸ್ತ್ರ ಮನಃಶಾಸ್ತ್ರಗಳ ಹಿನ್ನೆಲೆಯಲ್ಲಿ ಅನೇಕ ಅತ್ಯಾಧುನಿಕ ಶಿಕ್ಷಣ ವಿಧಾನಗಳನ್ನು ಇಲ್ಲಿ ಕಲಿಸಲಾಗುತ್ತಿದೆ.






ಕೆಲವು ವರ್ಷಗಳ ಹಿಂದೆ ಸಿ.ಬಿ.ಎಸ್.ಇ. ಪಠ್ಯಕ್ರಮವನ್ನು ಹೊಂದಿರುವ ಪ್ರೌಢಶಾಲೆಯನ್ನು ಇಲ್ಲಿ ಸ್ಥಾಪಿಸಲಾಯಿತು. ಉನ್ನತ ಗುಣಮಟ್ಟವನ್ನು ಹೊಂದಿರುವ ಈ ಶಾಲೆಯಲ್ಲಿ ಸುಮಾರು ಎರಡು ಸಾವಿರ ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ಉತ್ತಮ ಶಿಕ್ಷಕರು, ಸುಸಜ್ಜಿತ ಕಟ್ಟಡ, ಅತ್ಯುತ್ತಮ ಪ್ರಯೋಗ ಶಾಲೆ, ಒಳ್ಳೆಯ ಗ್ರಂಥಾಲಯ, ಇತ್ಯಾದಿಗಳನ್ನು ಹೊಂದಿರುವ ಈ ಶಾಲೆ ಕಾಲಟಿಯ ಪರಿಸರದಲ್ಲೆಲ್ಲ ತುಂಬ ಪ್ರಸಿದ್ಧವಾದುದು.

ಕಾಲಟಿಯ ಸಮೀಪದ ಶೋರನೂರು ಎಂಬಲ್ಲಿ 2006ರಲ್ಲಿ ಆರಂಭಿಸಲಾದ ಪಿ.ಎನ್.ಎನ್.ಎಂ. ಆಯುರ್ವೇದ ಮೆಡಿಕಲ್ ಕಾಲೇಜು ದೇಶದ ಅತ್ಯುತ್ತಮ ಆಯುರ್ವೇದ ಕಾಲೇಜಾಗಿ ಮೂಡಿಬರುತ್ತಿದೆ. ಆಯುರ್ವೇದಕ್ಕೆ ಸಂಬಂಧಿಸಿದ ವಿಚಾರಗಳಲ್ಲದೆ ವಾಸ್ತು, ಜ್ಯೋತಿಷ ಮೊದಲಾದ ಪ್ರಾಚೀನ ವಿಜ್ಞಾನದ ಅಧ್ಯಯನಕ್ಕೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದಿಶಂಕರ ಟ್ರಸ್ಟ್ ನಡೆಸುತ್ತಿರುವ ಈ ಎಲ್ಲ ಶಿಕ್ಷಣ ಸಂಸ್ಥೆಗಳ ಅತ್ಯುತ್ತಮ ಶೈಕ್ಷಣಿಕ ಗುಣಮಟ್ಟ ಮತ್ತು ವಿದ್ಯಾರ್ಥಿಗಳಲ್ಲಿ ಮೂಡಿಸುತ್ತಿರುವ ಸಮಾಜ ಕಲ್ಯಾಣದ ಅರಿವನ್ನು ಗಮನದಲ್ಲಿಟ್ಟುಕೊಂಡು 'ಜಗದ್ಗುರು ಅಭಿನವ ವಿದ್ಯಾತೀರ್ಥ ವಿಶ್ವವಿದ್ಯಾಲಯ' ಎಂಬ ಹೆಸರಿನ ಸ್ವಾಯತ್ತ ವಿಶ್ವವಿದ್ಯಾಲಯದ ಸ್ಥಾಪನೆಗೆ ಆಡಳಿತ ಮಂಡಳಿಯವರು ಭಾರತ ಸರಕಾರದ ಮಾನವಸಂಪನ್ಮೂಲ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಿರುವುದು ಗಮನಾರ್ಹವಾದ ಸಂಗತಿ.

ಶಂಕರರ ಜನ್ಮಭೂಮಿ ಕಾಲಟಿಯಲ್ಲದೆ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ 'ಶಾರದಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್' ಎಂಬ ಶಿಕ್ಷಣ ಸಂಸ್ಥೆ ನಡೆಯುತ್ತಿದೆ. ಇಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಪ್ರಸಿದ್ಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುತ್ತಿರುವುದು ಈ ಸಂಸ್ಥೆಗೆ ದೊರಕುತ್ತಿರುವ ರಾಷ್ಟ್ರೀಯಮನ್ನಣೆಯ ದ್ಯೋತಕ. ದೆಹಲಿಯ ಸಮೀಪದ ನೊಯಿಡ ಎಂಬಲ್ಲಿ ಶೃಂಗೇರಿ ಶ್ರೀಶಾರದಾ ಪೀಠವು ಮಾನಸಿಕ ಅಸ್ವಸ್ಥ ಮಕ್ಕಳಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದೆ. ಇದರಲ್ಲಿ ವಾಕ್‌ಶ್ರವಣ ಚಿಕಿತ್ಸೆಯ ಜತೆಗೆ ಉದ್ಯೋಗ ಮತ್ತು ಉತ್ತಮ ಹವ್ಯಾಸಗಳ ತರಬೇತಿಯನ್ನು ನೀಡಲಾಗುತ್ತಿದೆ. ತಿರುಪ್ಪೂರಿನ ಭಾರತೀವಿದ್ಯಾಶ್ರಮದ ಆಶ್ರಯದಲ್ಲಿ ಇಂತಹುದೇ ಮತ್ತೊಂದು ಶಾಲೆಯು ನಡೆಯುತ್ತಿದೆ.

(ಮುಂದುವರಿಯುವುದು)

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702


ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O)

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಕರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಯುರೋಪ್ ಪ್ರವಾಸ ಕಥನ

ಮಹಾಲಕ್ಷ್ಮೀ ಶಾನುಭಾಗ್, ಅಂಬಲಪಾಡಿ

(ಹಿಂದಿನ ಸಂಚಿಕೆಯಿಂದ)

**ಇಟಲಿ :** ಲಂಡನ್, ನೆದರ್‌ಲ್ಯಾಂಡ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್ಲೆಂಡ್ ಹಾಗೂ ಆಸ್ಟ್ರಿಯಾ ದೇಶಗಳನ್ನು ಸಂದರ್ಶಿಸಿದ ಬಳಿಕ ನಾವು ಪ್ರವಾಸದ 9ನೇ ದಿನ ತಾ.27-7-2011ರಂದು ಇಟಲಿ ದೇಶದ Verona ಪಟ್ಟಣವನ್ನು ತಲುಪಿದೆವು. ಅಲ್ಲಿಯ ಸಿಟಿಟೂರ್‌ನ UNESCO World Heritage Centreನಲ್ಲಿ ಸುಂದರ ಪ್ರಾಚೀನ ಕಟ್ಟಡಗಳು, ಚರ್ಚುಗಳು ಹಾಗೂ ವಿಸ್ತಾರವಾದ Square(ಚೌಕ)ಗಳನ್ನು ನೋಡಿದೆವು. ಅಲ್ಲಿ ನೋಡಿದ ರೋಮಿಯೋ ಹಾಗೂ ಜೂಲಿಯೆಟ್ ಭೇಟಿಯಾಗುತ್ತಿದ್ದ ಬಾಲ್ಕನಿ ಹಾಗೂ ಅವರಿಬ್ಬರ ಪ್ರತಿಮೆಗಳು ತುಂಬಾ ಆಕರ್ಷಕವಾಗಿದ್ದವು.

ಅಲ್ಲಿಂದ ನಾವು ಕಾಲುವೆಗಳು ಹಾಗೂ ದ್ವೀಪಗಳಿಂದ ಆವೃತವಾದ 'ವೆನಿಸ್' (Venice) ನಗರವನ್ನು ತಲುಪಿದೆವು. ವೆನಿಸ್ ನಗರವು 117 ದ್ವೀಪಗಳಿಂದ ಕೂಡಿದ್ದು ಸ್ಪೀಡ್ ಬೋಟಿನಲ್ಲಿ ಇಡೀ ವೆನಿಸ್‌ನಗರವನ್ನು ಸುತ್ತಾಡಿದೆವು. ಕಾಲುವೆಯ ಇಕ್ಕೆಲಗಳಲ್ಲಿ ಅತಿ ಎತ್ತರದ ಭವ್ಯ ಕಟ್ಟಡಗಳಿದ್ದು ನಗರವು ತುಂಬಾ ಸುಂದರವಾಗಿದೆ. ಇಲ್ಲಿ ಸಂಚಾರದ ವ್ಯವಸ್ಥೆ ಹೆಚ್ಚಾಗಿ ಬೋಟಿನಲ್ಲಿಯೇ ಇದ್ದು ನಾವು ಕೂಡಾ ಬೋಟಿನಲ್ಲಿಯೇ ಊಟ ಮುಗಿಸಿ ಅಲ್ಲಿಯ ಪ್ರಸಿದ್ಧ St.Mark's Squareನ್ನು ನೋಡಿದೆವು. ಈ ಸ್ಥಳವು ಅತಿ ವಿಸ್ತಾರವಾಗಿದ್ದು ಸುತ್ತಲೂ ಎತ್ತರವಾದ ಪ್ರಾಚೀನ ಗೋತಿಕ್ ಶೈಲಿಯ ಕಟ್ಟಡಗಳನ್ನು ಹೊಂದಿದೆ. ಇಲ್ಲಿ ಪ್ರತಿಮುಖ್ಯ ಕಟ್ಟಡದ ಹಿಂದೆಯೂ ಒಂದೊಂದು ಕತೆ ಇದ್ದು ಯುರೋಪಿಯನ್ ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡಿದ ನಮ್ಮ ಟೂರ್‌ಮೆನೇಜರ್ ರೋಹಿತ್‌ನಾಯ್ಡು ಸವಿಸ್ತಾರವಾಗಿ ಅವುಗಳ ಚರಿತ್ರೆಯನ್ನು ವಿವರಿಸಿದರು.

ನಂತರ ನಾವು ಅಲ್ಲಿಯ ಪ್ರಸಿದ್ಧ Murano Glass Factoryಯನ್ನು ಸಂದರ್ಶಿಸಿ ಅಲ್ಲಿ ವಿವಿಧ ನಮೂನೆಯ ಗಾಜಿನ ಉಪಕರಣಗಳನ್ನು, ಗೊಂಬೆಗಳನ್ನು ತಯಾರಿಸುವ ಪ್ರಾತ್ಯಕ್ಷಿಕೆಯನ್ನು ಕಂಡೆವು. ನಂತರ ಇಟೆಲಿಯ 'Florence' ನಗರ ತಲುಪಿದೆವು. Arno ನದಿಯ ಮೇಲೆ ಕಟ್ಟಿದ ಹಳೆಯ, ಸುಂದರ ಸೇತುವೆಯನ್ನು ನೋಡಿದೆವು. ಮೈಕಲ್ ಏಂಜೆಲೋ ಇವರ ಸುಪ್ರಸಿದ್ಧ ಕಲಾಕೃತಿಗಳಲ್ಲಿ ಒಂದಾದ ಡೇವಿಡ್‌ನ ಪ್ರತಿಮೆಯನ್ನೂ ಹಾಗೂ ಇನ್ನಿತರ ಅನೇಕ ಕಲಾಕೃತಿಗಳನ್ನೂ ನೋಡಿದೆವು.

ಮರುದಿನ ಮುಂಜಾನೆ 'Rome' ನಗರ ವೀಕ್ಷಣೆಯಲ್ಲಿ ನಮಗೆ ಇಂಗ್ಲಿಷ್ ಮಾತಾಡಲು ಬರುವ ಸ್ಥಳೀಯ ಗೈಡ್ ಇದ್ದಳು. ರೋಮ್ ಸಿಟಿ ಟೂರಿನಲ್ಲಿ ಅಲ್ಲಿಯ ಸುಪ್ರಸಿದ್ಧ ಭವ್ಯ Colosseum, Victor Emmanuel Monument, Roman Forum, Circus Maximus ಹಾಗೂ ಹಳೆಯ ದೇವಾಲಯಗಳ ಬಗ್ಗೆ ವಿಸ್ತಾರವಾಗಿ ವಿವರಿಸಿದಳು. ರೋಮನ್ ಸಾಮ್ರಾಜ್ಯವು ಜಗತ್ತಿನ ಅತಿ ಪ್ರಾಚೀನ ಸಂಸ್ಕೃತಿಯಾಗಿದ್ದು ಈಜಿಪ್ಟಿನ ಸಂಸ್ಕೃತಿಯಂತೆ ಬಹುಕಾಲ ಮೆರೆದ ಕೀರ್ತಿಗೆ ಪಾತ್ರವಾಗಿದೆ. ಅಲ್ಲಿಯ ಭವ್ಯ 'Trevi Fountain' ರೋಮನ್ ಕಲಾಕೃತಿಯ ಶ್ರೇಷ್ಠ ಪರಂಪರೆಗೆ ಸಾಕ್ಷಿಯಾಗಿದೆ. ಈ Fountainಗೆ ನಾಣ್ಯಗಳನ್ನು ಹಾಕಿ ಪ್ರಾರ್ಥಿಸಿದರೆ ಇಷ್ಟಾರ್ಥ ಸಿದ್ಧಿಯಾಗುತ್ತದೆ ಎಂಬ ನಂಬಿಕೆ ಜನರಲ್ಲಿ ಇದೆ.



Leaning Tower of Pisa

ಬಳಿಕ ನಾವು 'Pisa' (ಪೀಸಾ) ನಗರಕ್ಕೆ ಹೋಗಿ ಅಲ್ಲಿರುವ ಜಗತ್ಪ್ರಸಿದ್ಧ 'Tower of Pisa' ನೋಡಿದೆವು. ಈ ಗೋಪುರವು 177 ವರ್ಷ ಪುರಾತನವಾಗಿದೆ. 183 ಅಡಿ ಎತ್ತರವಾಗಿದ್ದು 296 ಮೆಟ್ಟಿಲುಗಳನ್ನು ಹೊಂದಿದೆ. ಈ ಗೋಪುರದ ತಳಹದಿಯು ಮೃದು ಮಣ್ಣಿನಲ್ಲಿರುವುದರಿಂದ 3.99 ಡಿಗ್ರಿ ವಾಲಿದೆ. ಈ ಗೋಪುರವು 7 ಅಂತಸ್ತುಗಳನ್ನು ಹೊಂದಿದ್ದು, ಅಮೃತಶಿಲೆಯಿಂದ ರಚಿಸಲ್ಪಟ್ಟಿದ್ದು ಅದರ ದೃಶ್ಯ ನಯನಮನೋಹರವಾಗಿದೆ. ಈ ಗೋಪುರದ ಅಂದ ಚಂದ ವರ್ಣಿಸಲು ಅಸಾಧ್ಯ. ಇದು ವಾಲುತಲೇ ಇರುವುದರಿಂದ ಇದರ ಮೇಲೆ ಪ್ರವಾಸಿಗರ ಪ್ರವೇಶ ನಿಯಂತ್ರಿಸಲಾಗಿದೆ.

**ವೆಟಿಕನ್ :** ಬಳಿಕ ನಾವು Vetican ತಲುಪಿದೆವು. ವೆಟಿಕನ್ ನಗರದ ಸಿಟಿಟೂರಿನಲ್ಲಿ Tiber ನದಿ ದಂಡೆಯಲ್ಲಿರುವ, 110 ಎಕ್ರೆ ವಿಸ್ತೀರ್ಣವನ್ನು ಹೊಂದಿದ್ದ ಅಲ್ಲಿಯ ಸುಪ್ರಸಿದ್ಧ St.Peter's Basilica ಚರ್ಚನ್ನು ನೋಡಿದೆವು. 1626ರಲ್ಲಿ ಈ ಚರ್ಚ್ ಕಟ್ಟಲ್ಪಟ್ಟಿದೆ. ಇದು ರೋಮನ್ ಕೆಥೋಲಿಕರ ಅತಿ ಪವಿತ್ರ ಯಾತ್ರಾ ಸ್ಥಳ. ಅವರ ಧರ್ಮಗುರು ಪೋಪ್ ಇಲ್ಲಿರುತ್ತಾರೆ. 829 ಜನಸಂಖ್ಯೆಯನ್ನೂ, ಸ್ವತಂತ್ರ ಅಸ್ತಿತ್ವವನ್ನೂ ಹೊಂದಿರುವ ವೆಟಿಕನ್ ನಗರವು ಅತಿ ದೊಡ್ಡ ಚೌಕವನ್ನು ಒಳಗೊಂಡಿದೆ. ಈ ಚರ್ಚಿನ ಗುಮ್ಮಟವು ಗಾತ್ರದಲ್ಲಿ ಜಗತ್ತಿನಲ್ಲಿಯೇ ಮೊದಲನೆಯದೆನಿಸಿದೆ. (ಎರಡನೆಯ ಸ್ಥಾನದಲ್ಲಿ ಬಿಜಾಪುರದ ಗೋಲ್‌ಗುಮ್ಮಟವಿದೆ) ಇದು ಜಗತ್ತಿನ ಅತಿ ಚಿಕ್ಕ ಸ್ವತಂತ್ರ ರಾಷ್ಟ್ರವಾಗಿದೆ. ಈ ಚರ್ಚ್ ಅತಿ ವಿಸ್ತಾರವಾಗಿದ್ದು ಇಲ್ಲಿರುವ ಮೈಕಲ್ ಏಂಜೆಲೋ ನಿರ್ಮಿತ ಏಸುಕ್ರಿಸ್ತ ಹಾಗೂ ಮರಿಯಾಳ ಪ್ರತಿಮೆಗಳು ಜಗತ್ಪ್ರಸಿದ್ಧವಾಗಿದೆ. ಇಲ್ಲಿಯ ಪ್ರತಿಮೆಗಳು ಹಾಗೂ ಪೈಂಟಿಂಗ್‌ಗಳು ಜಗತ್ತಿನಲ್ಲೇ ಶ್ರೇಷ್ಠವೆನಿಸಿದ್ದು ಪ್ರತಿಯೊಬ್ಬರೂ ನೋಡಿ ಅಚ್ಚರಿಪಡುವಷ್ಟು ಸುಂದರವಾಗಿದೆ.



St.Peter's Square-The Vetican

**ಪ್ಯಾರಿಸ್ :** ನಮ್ಮ ಯುರೋಪ್ ಪ್ರವಾಸದ ಕೊನೆಯ ದೇಶವಾದ ಫ್ರಾನ್ಸನ್ನು ನಾವು 30-7-2011ರಂದು ತಲುಪಿದೆವು. Seine ನದಿಯ ದಂಡೆಯ ಮೇಲಿರುವ ಪ್ಯಾರಿಸ್ ಪಟ್ಟಣವು ಫ್ರಾನ್ಸಿನ ರಾಜಧಾನಿಯಾಗಿದ್ದು ಭವ್ಯ ಹಾಗೂ ಪ್ರಾಚೀನ ಕಟ್ಟಡಗಳನ್ನು ಹೊಂದಿದೆ ಮತ್ತು ಕಲೆ, ಸಂಸ್ಕೃತಿ, ಫ್ಯಾಷನ್‌ಗೆ ಹೆಸರುವಾಸಿಯಾಗಿದೆ. ಇಲ್ಲಿಯ ರಸ್ತೆಗಳು ಮೋಟಾರು ವಾಹನಗಳಿಂದ ತುಂಬಿದ್ದು ನಮ್ಮ ಟೂರ್‌ಬಸ್ಸಿನ ಚಲನೆ ತುಂಬಾ ನಿಧಾನವಾಗಿತ್ತು. ರಸ್ತೆಗಳು ವಾಹನಗಳಿಂದ ತುಂಬಿದ್ದರೂ ಅವು ನಿಧಾನವಾಗಿ ಸದ್ದಿಲ್ಲದೆ ಚಲಿಸುತ್ತಿದ್ದು ಎಲ್ಲಿಯೂ ವಾಹನಗಳ ಹಾರ್ನಿನ ಶಬ್ದ ಕೇಳಿಬರುತ್ತಿರಲಿಲ್ಲ.

Seine ನದಿಯಲ್ಲಿ ದೊಡ್ಡ ಬೋಟಿನಲ್ಲಿ ಕುಳಿತು ಪ್ರಯಾಣಿಸುತ್ತಾ ನಗರ ವೀಕ್ಷಣೆ ಮಾಡಿದೆವು. ಉಪಾಹಾರದ ವ್ಯವಸ್ಥೆಯನ್ನೂ ಬೋಟಿನಲ್ಲೇ ಮಾಡಲಾಗಿತ್ತು. ಫಲಾಹಾರ ಮುಗಿಸಿ ಇಕ್ಕೆಲಗಳ ಭವ್ಯ ಕಟ್ಟಡಗಳನ್ನು, ಪ್ರಕೃತಿಯ ಸೊಬಗನ್ನೂ ವೀಕ್ಷಿಸಿದೆವು. ಇಲ್ಲಿಯೂ ನಮಗೆ ಇಂಗ್ಲೀಷ್ ಮಾತನಾಡುವ ಲೋಕಲ್ ಟೂರ್ ಗೈಡ್ ಇದ್ದಳು. ಅವಳು Opera House, Champs Elysees, Concord Square ಹಾಗೂ Arc De Triomphe ಮೊದಲಾದ ಪ್ರಸಿದ್ಧ ಸ್ಮಾರಕಗಳನ್ನು ತೋರಿಸಿ ವಿವರವಾಗಿ ವರ್ಣಿಸಿದಳು. ಇಲ್ಲಿಯ Concord Square ಅತಿ ವಿಶಾಲವಾಗಿದ್ದು ಮಧ್ಯದಲ್ಲಿರುವ ಪ್ರತಿಮೆ ಹಾಗೂ ಕಾರಂಜಿಗಳು ತುಂಬಾ ಸುಂದರವಾಗಿವೆ.



Eiffel Tower, Paris

Arc De Triomphe ಫ್ರೆಂಚ್ ಕ್ರಾಂತಿಯಲ್ಲಿ ಹಾಗೂ ನೆಪೋಲಿಯನ್‌ನ ಯುದ್ಧದಲ್ಲಿ ಬಲಿದಾನ ಮಾಡಿದ ಸೈನಿಕರಿಗಾಗಿ ಕಟ್ಟಿದ ಭವ್ಯ ಸ್ಮಾರಕವಾಗಿದೆ. ಈ ಕಟ್ಟಡವು 1806ರಲ್ಲಿ ಕಟ್ಟಲ್ಪಟ್ಟಿದ್ದು 164 ಅಡಿ ಎತ್ತರವಾಗಿದ್ದು ನೋಡಲು ಭವ್ಯವಾಗಿದೆ.



Concord Square-Paris

ಮರುದಿನ ಬೆಳಿಗ್ಗೆ ನಾವು ಅಲ್ಲಿಯ ಸುಪ್ರಸಿದ್ಧ 'EIFFEL TOWER' ನೋಡಲು ಹೋದೆವು. ಇಲ್ಲಿ ಹೋಗಲು ನಮ್ಮ ಟೂರ್ ಮೆನೇಜರ್ ಮೊದಲೇ ಟಿಕೇಟನ್ನು Onlineನಲ್ಲಿ ಬುಕ್ ಮಾಡಿದುದರಿಂದ ಅಲ್ಲಿ ತುಂಬಾ ಜನಸಂದಣಿ ಇದ್ದರೂ ಕ್ಯೂನಲ್ಲಿ ಹೋಗಲು ಅನುಕೂಲವಾಯಿತು. Eiffel Tower 1889ರಲ್ಲಿ Gustav Eiffel ಎಂಬ ಇಂಜಿನಿಯರಿಂದ ಕಟ್ಟಲ್ಪಟ್ಟಿದ್ದು ಅದಕ್ಕೆ ಅವನ ಹೆಸರನ್ನೇ ಇಟ್ಟಿದ್ದಾರೆ. ಇದು 1013 ಅಡಿ ಎತ್ತರವಾಗಿದೆ. ಈ Eiffel Tower ಕಟ್ಟಲು 7300 ಟನ್ ಕಬ್ಬಿಣವನ್ನು ಉಪಯೋಗಿಸಿದ್ದು ಪ್ರತೀ 7 ವರ್ಷಕ್ಕೊಮ್ಮೆ Paint ಮಾಡಲು 60 ಟನ್ ಪೈಂಟ್ ಬಳಸುತ್ತಾರೆ. ಇದು ಪ್ಯಾರಿಸ್ಸಿನಲ್ಲಿಯೇ ಅತಿ ಎತ್ತರದ ಗೋಪುರವಾಗಿದ್ದು (81 ಅಂತಸ್ತುಗಳ ಕಟ್ಟಡದ ಎತ್ತರಕ್ಕೆ ಸಮ) ಅವರ ತಾಂತ್ರಿಕತೆಯ ನೈಪುಣ್ಯಕ್ಕೆ ನೈಜ ಸಾಕ್ಷಿಯಾಗಿದ್ದು ನೋಡಲು ಭವ್ಯವೂ ಸುಂದರವೂ ಆಗಿದೆ. ಇದರಲ್ಲಿ 3 ಹಂತಗಳಿದ್ದು ಮೊದಲನೆ ಹಂತದವರೆಗೆ ನಾಲ್ಕೂ ಕಡೆಯ ಲಿಫ್ಟ್‌ಗಳು ನಿಧಾನವಾಗಿ ಜನರನ್ನು ಮೇಲೆ ಒಯ್ಯುತ್ತವೆ. ಅಲ್ಲಿಂದ 2ನೇ ಹಂತಕ್ಕೆ ಮತ್ತೆ ಬೇರೆ ಲಿಫ್ಟ್. ಇದು ಸ್ವಲ್ಪ ವೇಗವಾಗಿ ಮೇಲೇರುತ್ತದೆ. ಕೊನೆಯ ಹಾಗೂ 3ನೇ ಹಂತವು ತುಂಬಾ ಎತ್ತರವಾಗಿದ್ದು ಇಲ್ಲಿಯ ಲಿಫ್ಟ್ ವೇಗವಾಗಿ ಚಲಿಸಿ ಟವರಿನ ತುತ್ತ ತುದಿಯನ್ನು ತಲುಪುತ್ತದೆ. ಈ ಲಿಫ್ಟಿನಲ್ಲಿ ಪ್ರಯಾಣ ಉಸಿರು ಬಿಗಿಹಿಡಿದು ಮೈ ಜುಂ ಅನ್ನಿಸುವಂತಹಾ ಅನುಭವ. Eiffel ಟವರಿನ ತುತ್ತತುದಿ ಸೇರಿ ಅಲ್ಲಿಂದ ಕಾಣುವ ಇಡೀ ಪ್ಯಾರಿಸಿನ ದೃಶ್ಯ ನಯನ ಮನೋಹರ. ವರ್ಣಿಸಲು ಶಬ್ದಗಳೇ ಸಾಲದು. ಸುಮಾರು ಅರ್ಧಗಂಟೆ ಮೇಲೆಯೇ ತಿರುಗಾಡಿ ಇಡೀ ಪ್ಯಾರಿಸ್ಸಿನ ಸುಂದರ ಸೊಬಗನ್ನು ಸವಿದು ಸಾಕಷ್ಟು Photo ತೆಗೆದು ಮೇಲೆ ಹೋದ ಹಾಗೆಯೇ ಕೆಳಗಿಳಿದು ಬಂದೆವು.

ಊಟವಾದ ಬಳಿಕ ಪ್ಯಾರಿಸ್ಸಿನ ಡಿಸ್ನಿಲ್ಯಾಂಡ್ (Euro Disneyland)ಗೆ ಹೋದೆವು. ಡಿಸ್ನಿಲ್ಯಾಂಡ್ ತುಂಬಾ ವಿಶಾಲವಾಗಿದ್ದು ಸುಮಾರು 5000 ಎಕ್ರೆ ಗಳಲ್ಲಿ ಹರಡಿದ್ದು ವಿವಿಧ ಪಾರ್ಕ್, ಸ್ಟುಡಿಯೋ, ರೆಸ್ಟೋರೆಂಟ್‌ಗಳನ್ನು ಒಳಗೊಂಡಿದೆ. ಮಕ್ಕಳಿಗೆ ಹಾಗೂ ದೊಡ್ಡವರಿಗೆ ಬೇಕಾದ ಗೇಮ್ಸ್‌ಗಳೂ ಇಲ್ಲಿವೆ. ಇಲ್ಲಿ Walt Diney Studio ಕೂಡಾ ಇದೆ. ಇಲ್ಲಿಯ ವಿವಿಧ ರೀತಿಯ film show, stunt showಗಳು ಆಕರ್ಷಕವಾಗಿದ್ದವು. ಇಲ್ಲಿ Rock and Roller Coasterನಲ್ಲಿ ಆಡಿದ ಅನುಭವವಂತೂ ಅವಿಸ್ಮರಣೀಯ. ಡಿಸ್ನಿಲ್ಯಾಂಡ್‌ನ ಒಳಗೆ ಒಮ್ಮೆ ಹೋದರೆ ಸಾಯಂಕಾಲದವರೆಗೆ ಸಮಯ ಕಳೆದುದೇ ತಿಳಿಯುವುದಿಲ್ಲ. ಒಳಗೆ ತಿಂಡಿ, ಪಾನೀಯಗಳು ಲಭ್ಯವಿದ್ದು ವ್ಯವಸ್ಥೆಯು ತುಂಬಾ ಅಚ್ಚುಕಟ್ಟಾಗಿದೆ. ಹೀಗಾಗಿ ಇಡೀ ದಿನ ಜನರಿಂದ ತುಂಬಿರುತ್ತದೆ.



Euro Disney Paris

ಆ ದಿನ ರಾತ್ರಿ ಟೂರಿನ ಕೊನೆಯ ಡಿನ್ನರ್‌ಪಾರ್ಟಿಯ ವ್ಯವಸ್ಥೆ ಆಗಿದ್ದು ಉತ್ತರ ಭಾರತದ ಊಟದ ಜತೆ ಹಿತವಾದ ಸಂಗೀತ ಕಾರ್ಯಕ್ರಮ ಹಾಗೂ ಕುಡಿಯ ಬಯಸಿದವರಿಗೆ unlimited wine ಇತ್ತು. ರಾತ್ರಿ 11 ಗಂಟೆಗೆ Hotel Mercureನಲ್ಲಿ ಸುಪ್ರಸಿದ್ಧ Lido Show (ಸಂಗೀತ ಕಾರ್ಯಕ್ರಮ) ಇತ್ತು. ಇದಕ್ಕಾಗಿ ಪ್ರತ್ಯೇಕವಾಗಿ 100 ಯುರೋ (ಸುಮಾರು 6,500ರೂ.) ಕೊಡಬೇಕಾಗಿತ್ತು. ನಮ್ಮ ಗ್ರೂಪಿನಿಂದ ಕೆಲವೇ ಮಂದಿ Lido show ನೋಡಿ ಬಂದು ತಮ್ಮ ಅನುಭವಗಳನ್ನು ಎಲ್ಲರೊಡನೆ ಹಂಚಿಕೊಂಡರು.

ಪ್ರವಾಸದ ಕೊನೇ ದಿನ (15ನೇ ದಿನ) ಬೆಳಿಗ್ಗೆ ನಾವು ಫಲಾಹಾರ ಮುಗಿಸಿ ಹೋಟೇಲಿನ ಬಸ್ಸಿನಲ್ಲಿ ಫ್ರಾನ್ಸಿನ ಚಾಲ್ಸ್ ಡಿಗಾಲೆ ವಿಮಾನ ನಿಲ್ದಾಣಕ್ಕೆ ಬಂದೆವು. ಈ ವಿಮಾನ ನಿಲ್ದಾಣವು ವಿಶಾಲವಾಗಿದ್ದು ಸುಸಜ್ಜಿತವಾಗಿದೆ. ಮಧ್ಯಾಹ್ನ 3 ಗಂಟೆಗೆ Emirates ಸಂಸ್ಥೆಯ ಬೋಯಿಂಗ್ ವಿಮಾನವನ್ನು ಹತ್ತಿ ದುಬ್ಬಾಯನ್ನು ರಾತ್ರಿ 9.30 ಗಂಟೆಗೆ ತಲುಪಿದೆವು. ದುಬೈಯಲ್ಲಿ ಮತ್ತೆ ರಾತ್ರಿ 11.30 ಗಂಟೆಗೆ ಬೇರೊಂದು Emirates ಬೋಯಿಂಗ್ ವಿಮಾನವನ್ನು ಹತ್ತಿ 4 ತಾಸುಗಳ ಪ್ರಯಾಣದ ಬಳಿಕ ಬೆಂಗಳೂರನ್ನು ತಲುಪಿದೆವು.


ಯೂರೋಪ್ ಪ್ರವಾಸದಲ್ಲಿ ಬೆಂಗಳೂರಿನಿಂದ ದುಬ್ಬಾ ಮೂಲಕ ಲಂಡನ್‌ಗೆ ಮತ್ತು ತಿರುಗಿ ಬರುವಾಗ ಪ್ಯಾರಿಸ್ಸಿನಿಂದ ದುಬ್ಬಾ ಮೂಲಕ ಬೆಂಗಳೂರಿಗೆ ಮಾತ್ರವೇ ವಿಮಾನ ಪ್ರಯಾಣ ಮಾಡಿದ್ದೆವು. ಲಂಡನ್‌ನಿಂದ ನೆದರ್‌ಲ್ಯಾಂಡ್‌ಗೆ 1 ರಾತ್ರಿ ಹಡಗಿನ ಮೂಲಕ ಪ್ರಯಾಣಿಸಿದ್ದೆವು. ಬಾಕಿ ಎಲ್ಲಾ ದೇಶಗಳೂ ಒತ್ತೊತ್ತಾಗಿ ಇದ್ದು ಗ್ರೂಪ್ ವೀಸಾದ ಅನುಕೂಲವಿದ್ದುದರಿಂದ ಸುಸಜ್ಜಿತ VOLVO ಬಸ್ಸಿನಲ್ಲಿಯೇ ಪ್ರಯಾಣ ಸಾಗಿತ್ತು. ಬಸ್ಸು ಸುಸಜ್ಜಿತವಾಗಿದ್ದು ಅನುಭವಿ ಚಾಲಕನಿಂದಾಗಿ ಪ್ರತಿದಿನ 300ರಿಂದ 500 ಕಿ.ಮಿ. ಪ್ರಯಾಣ ಮಾಡಿದರೂ ಸುಸ್ತಾಗುತ್ತಿರಲಿಲ್ಲ. ದಾರಿ ಮಧ್ಯದಲ್ಲಿ ಕಾಲಕಾಲಕ್ಕೆ ಭಾರತೀಯ ಊಟ, ತಿಂಡಿ ವ್ಯವಸ್ಥೆ ಇದ್ದುದರಿಂದ ನಮ್ಮ ಯುರೋಪ್ ಪ್ರವಾಸವು ಏನೂ ತೊಂದರೆ ಇಲ್ಲದೆ ಮುಗಿದು ಮನಸ್ಸಿಗೆ ಸಂತೃಪ್ತಿಯಾಯಿತು.

ಈ ಪ್ರವಾಸದಲ್ಲಿ ನಾವು ಯುರೋಪಿಯನ್ನರ ಶಿಸ್ತುಬದ್ಧ ಜೀವನ, ಶುಚಿತ್ವ ಹಾಗೂ ಪ್ರತೀ ಕೆಲಸದಲ್ಲಿಯೂ ಅವರಿಗಿರುವ ಶ್ರದ್ಧೆ ಹಾಗೂ ದೇಶಪ್ರೇಮವನ್ನು ಗಮನಿಸಿದೆವು. ಈ ಪ್ರವಾಸದ ನಮ್ಮ ಅನುಭವವು ಆಸಕ್ತ ಸಮಾಜ ಬಾಂಧವರಿಗೆ ಪ್ರೇರಣೆಯಾಗಲಿ ಎಂಬುದೇ ಈ ನಮ್ಮ ಲೇಖನದ ಉದ್ದೇಶ ಮತ್ತು ಹಾರೈಕೆ.

-ಶುಭಮಸ್ತು-

(...ಮುಗಿಯಿತು)

# ಕನ್ನಡ ಕವಿಕಾವ್ಯ ಪರಿಚಯ-೨ : ಕುಮಾರವ್ಯಾಸ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ ಮುಂದುವರಿದುದು)

**ರೂಪಕ ಸಾಮ್ರಾಜ್ಯ ಚಕ್ರವರ್ತಿ :**

'ನಾದಲೋಲ' ಮತ್ತು 'ಉಪಮಾಲೋಲ' ಎಂಬ ಬಿರುದುಗಳು ಲಕ್ಷ್ಮೀಶ ಕವಿಗಿದ್ದರೆ ಕುಮಾರ ವ್ಯಾಸನು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದನು. ತನ್ನ ಭಾಮಿನೀ ಷಟ್ಪದಿಯ ಮೂಲಕವಾಗಿ ವರ್ಣನೆಗಳನ್ನು ಮಾಡುತ್ತಾ ಕೆಲವು ಕಡೆಗಳಲ್ಲಿ ಅದ್ಭುತವಾದ ಮತ್ತು ಮನಮೋಹಕವಾದ ರೂಪಕಗಳನ್ನು ಕವಿ ಹೊಸೆದಿದ್ದಾನೆ. ಇವುಗಳನ್ನೋದುವಾಗ ನಮ್ಮ ಮನಸ್ಸೂ ಸಹಾ ರೂಪಕ ಸಾಮ್ರಾಜ್ಯದಲ್ಲಿ ವಿಹರಿಸುತ್ತದೆ. ಕಾಡಿನಲ್ಲಿ ತನ್ನ ಮಡದಿಯರೊಂದಿಗೆ ವಾಸಿಸಿದ್ದು, ಮಕ್ಕಳಿಲ್ಲದ ಬವಣೆಯನ್ನು ನೀಗಿಸಿ ಕೊಳ್ಳಲೋಸುಗ ನಿಯೋಗ ಪದ್ಧತಿಯ ಮೂಲಕವಾಗಿ ತನ್ನ ಇಬ್ಬರು ಪತ್ನಿಯರಾದ ಕುಂತಿ ಮತ್ತು ಮಾದ್ರಿಯರ ಮೂಲಕ ಐವರು ಪುತ್ರರನ್ನು ಪಡೆದ ಪಾಂಡುರಾಜನು ಸುಖದಿಂದಿರುವಾಗ ಹಿರಿಯ ಮಗನಾದ ಯುಧಿಷ್ಠಿರನಿಗೆ ಹದಿನಾರು ವರ್ಷ, ಭಿಮನಿಗೆ ಹದಿನೈದು, ಅರ್ಜುನನಿಗೆ ಹದಿನಾಲ್ಕು, ನಕುಲ-ಸಹದೇವರಿಗೆ ಹದಿಮೂರು ತುಂಬಿರುವಾಗ, ಕಾಡಿನಲ್ಲಿರುವ ಋಷಿ-ಮುನಿಗಳಿಂದ ಅಧ್ಯಯನಾದಿಗಳನ್ನು ಮಾಡುತ್ತಿದ್ದು ವಿದ್ಯಾನಿರತರಾಗಿದ್ದರು. ಆಗ ಅವರು ವಾಸವಾಗಿದ್ದ ಶತಶೃಂಗ ಪರ್ವತದಲ್ಲಿ ವಸಂತಋತು ಕಾಲಿಟ್ಟಿತು ಎಂಬುದನ್ನು ಕವಿಯ ಮಾತಿನಲ್ಲಿ ಈ ರೀತಿಯಾಗಿ ಕೇಳಬಹುದು.

*ಮೊರೆವ ತುಂಬಿಯ ಗಾಯಕರ ನಯ-।*
*ಸರದ ಕೋಕಿಲ ಪಾಠಕರ ಬಂ-।*
*ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ ॥*
*ಅರಳಿದಂಬುಜ ಸತ್ತಿಗೆಯ ಮಂ-।*
*ಜರಿಯ ಕುಸುಮದ ಚಾಮರದ ಚಾ-।*
*ತುರ ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ ॥*

'ವಸಂತ ಋತುವನ್ನು ಒಬ್ಬ ರಾಜನನ್ನಾಗಿಸಿ, ಆ ರಾಜನು ಪಾಂಡುರಾಜನ ಮೇಲೆ ದಾಳಿಯಿಟ್ಟನು' ಎನ್ನುತ್ತಾ ಕವಿಯು ವಸಂತರಾಜನ ಆಗಮನಕ್ಕಾಗಿ ಅವನ ಪರಿವಾರದಲ್ಲಿ ಝೇಂಕರಿಸುವ ತುಂಬಿಗಳು ಗಾಯಕರಾಗಿಯೂ, ಇಂಪಾಗಿ ಹಾಡುವ ಕೋಗಿಲೆಗಳು ಪಾಠಕರಾಗಿಯೂ, ಮಾತಿನಿಂದ ಪರರನ್ನು ಮೆಚ್ಚಿಸುವ ಗಿಳಿಗಳು ಪಂಡಿತರಾಗಿಯೂ, ಚಿಗುರಿದ ಮಾವಿನ ಮರಗಳೇ ಆನೆಗಳ ಸೈನ್ಯ, ಅರಳಿದ ತಾವರೆಗಳೇ ಛತ್ರ, ಹೂಗಳ ಸಾಲೇ ಚಾಮರವಾಗಿದ್ದು ಋತುರಾಜನಾದ ವಸಂತನು ಪಾಂಡುವಿನ ಮೇಲೆ ದಾಳಿಯಿಟ್ಟನು! ಎಷ್ಟೊಂದು ಸುಂದರವಾಗಿದೆ, ಈ ರೂಪಕದ ಸರಣಿ! ಇಂತಹ ಇನ್ನೂ ನೂರಾರು ಉದಾಹರಣೆಗಳನ್ನು ಕೊಡಬಹುದು:- 'ಶಿವನ ಕಾರುಣ್ಯಾಯುಧವೆ ಮಸೆದುದು ಸುರೇಂದ್ರ ಸ್ನೇಹ ಸಾಣೆಯಲಿ', 'ಮುನಿಯ ಮಾತಿನ ಬಲೆಗೆ ಸಿಲುಕಿತು. ಜನ ಪತಿಯ ಚೈತನ್ಯ ಮೃಗ', 'ನಮ್ಮ ಭಾಗ್ಯದ ಬಾಣಸಿಗ ವಿಧಿ ವಿಷಯ ಬೆರೆಸುವೊಡಾರು ಕಾವರು', 'ಬಂಧುಗಳ ದರುಶನ ಫಲವಲಾ ಸಂಸಾರ ತರುವಿಂಗೆ', 'ಅಪಕೀರ್ತಿ ನಾರಿಯ ಸೆರಗ ಹಿಡಿದರು', ಹೀಗೆಯೇ ಅವನು ಹೇಳುವ ಭಾಷೆಯೇ ಭಾವನೆಯಾಗಿ, ಆ ಭಾಷೆಯೇ ರೂಪಕವಾಗುತ್ತದೆ. ರೂಪಕವನ್ನು ಅವನ ಮಾತಿನಿಂದ ಬಿಡಿಸಿ ತೆಗೆಯುವುದಕ್ಕೇ ಸಾಧ್ಯವಾಗುವುದಿಲ್ಲ- 'ಮೃತ್ಯುವಮರೆಹೊಕ್ಕಳು ಮಹೇಶ್ವರನ', 'ಹಡಗು ಜಲಧಿಯೊಳೋಡಿ ಗಿರಿಗಳನೆಡಹಿ ನುಗ್ಗಾದಂತೆ', 'ಕಾಳಕೂಟದ ಕಮಲ ತುಂಬಿಗೆ ಪಥ್ಯವಲ್ಲ', 'ನರಶರದ ಜೋಡಿನ ಜುಂಜುವಳೆಯಲಿ ಜಾಹ್ನವೀಧರ ಜಾರುವನೆ?', 'ಸೀಳಬಹುದೇ ಸೀಸದುಳಿಯಲಿ ಶೈಲವನು', 'ಬೆಳುದಿಂಗಳಲಿ ಮೈ ಬೆವರುವುದೆ?', 'ರುಧಿರದ ತಿಲಕನಾದನಲ್ಲೆ ಕುರುಪತಿ ಧರಾಂಗನೆಗೆ', 'ನುಡಿಗಳ ಕಾಳಕೂಟದ ಬಡಿಸುವೆನು ಕಿವಿಯಾರಸವಿಯೆಂದ', 'ಅಂಬುನಿಧಿ ಮಕರಂದವಾದರೆ ತುಂಬಿಯಾಗನೆ ವಡಬ?', ಇಂತಹ ನೂರಾರಲ್ಲ, ಸಹಸ್ರಾರು ಉದಾಹರಣೆಗಳನ್ನು ಹೆಕ್ಕಿ ಕೊಡಬಹುದು.

**ನವರಸಗಳು :** ಇನ್ನು, ನವರಸಗಳನ್ನು ಕವಿಕುಮಾರ ವ್ಯಾಸನಲ್ಲಿ ಕಾಣುವುದೇ ಒಂದು ಅಪ್ರತಿಮವಾದ ಸೌಂದರ್ಯ ದರ್ಶನವಾಗುತ್ತದೆ. ಸ್ವಯಂವರಕ್ಕಾಗಿ ಸಿಂಗಾರಗೊಂಡು ವಿವಾಹ ಮಂಟಪದೆಡೆಗೆ ಸಾಗುವ ಪಾಂಚಾಲಿ, ದೇವೇಂದ್ರನ ನೇಮದಂತೆ ರಾತ್ರಿ ಕಾಲದಲ್ಲಿ ಪಾರ್ಥನ ಸೆಜ್ಜೆವನೆಗೆ ಶೃಂಗರಿಸಿಕೊಂಡು ಗಜಗಮನೆಯಾಗಿ ನಡೆಯುವ ಊರ್ವಶಿ ಇವರುಗಳ ವರ್ಣನೆಯು ಶೃಂಗಾರ ರಸವನ್ನು ಪ್ರತಿನಿಧಿಸಿದರೆ, ಉತ್ತರ ಕುಮಾರನ ಪ್ರಸಂಗವು ಹಾಸ್ಯರಸದ ಹೊನಲನ್ನೇ ಹರಿಯಿಸುತ್ತದೆ. ದುಶ್ಯಾಸನನು ತನ್ನ ಸೀರೆಯನ್ನು ಸೆಳೆಯುತ್ತಿರುವಾಗ 'ಕೊಲುವುವೈ ಕಾಗೆಗಳ ಕಟ ಕೋಗಿಲೆಯ ಮರಿಯನು' ಎಂದು ಬೊಬ್ಬಿಡುವ ಪಾಂಚಾಲಿಯ ರೋದನವು ಕರುಣರಸಕ್ಕೆ ಉದಾಹರಣೆಯಾದರೆ, ಅಭಿಮನ್ಯುವು 'ಕದಳಿಯೊಳು ಮದದಾನೆ ಹೊಕ್ಕಂದದಲಿ' ಚಕ್ರವ್ಯೂಹವನ್ನು ಪ್ರವೇಶಿಸುವ ಸನ್ನಿವೇಶದ ವರ್ಣನೆಯು ವೀರರಸವನ್ನು ಪ್ರತಿಪಾದಿಸುತ್ತದೆ. ಭೀಮದುರ್ಯೋಧನರ ಗದಾಯುದ್ಧವು ರೌದ್ರರಸವನ್ನು ಬಿಂಬಿಸಿದರೆ, ಉತ್ತರನು ಬೃಹನ್ನಳೆಯ ಸಾರಥ್ಯದಲ್ಲಿ ಯುದ್ಧಕ್ಕೆ ಹೋಗುತ್ತಿದ್ದಾಗ ಬೃಹನ್ನಳೆಯನ್ನು ಕುರಿತು 'ಹಸಿದ ಮಾರಿಯ ಮಂದೆಯಲಿ ಕುರಿ ನುಸುಳಿದಂತಾದೆನು' ಎಂದು ಬೊಬ್ಬಿರಿಯುವ ಸನ್ನಿವೇಶವು ಭಯಾನಕ ರಸಕ್ಕೆ ಉದಾಹರಣೆಯಾಗಿದೆ. ಕುರುಕ್ಷೇತ್ರದ ಯುದ್ಧರಂಗದಲ್ಲಿ ಸತ್ತು ಬಿದ್ದ ಆನೆ, ಕುದುರೆಗಳು, ಹರಿವ ನೆತ್ತರ ಹೊನಲು, ಮುರಿದ ರಥಗಳ ಭಾಗಗಳು ಇತ್ಯಾದಿ ವರ್ಣನೆಯು ಭೀಭತ್ಸ ರಸವನ್ನುಂಟು ಮಾಡಿದರೆ, ಅಭಿಮನ್ಯುವು 'ಎರಡು ಶರದಲಿ ಲಕ್ಷಣನ ಕತ್ತರಿಸಿದನು, ಹದಿನೆಂಟು ಬಾಣದಲರಿದನುಳಿದ ಕುಮಾರಕರ' ಎಂಬ ವರ್ಣನೆಯು 'ಅದ್ಭುತ'ವೆನಿಸುತ್ತದೆ. ಮುನಿಗಳ ತಪೋವನದ ವರ್ಣನೆ, ಉದ್ಯಾನ-ಪುಷ್ಪವನಗಳ ವರ್ಣನೆ ಇತ್ಯಾದಿಗಳು ಶಾಂತರಸವನ್ನು ಉಂಟು ಮಾಡುತ್ತವೆ.

ಒಟ್ಟಿನಲ್ಲಿ ಕವಿ ಕುಮಾರವ್ಯಾಸನು ನವರಸ ನಾಯಕನೂ, ರೂಪಕ ಸಾಮ್ರಾಜ್ಯ ಚಕ್ರವರ್ತಿಯೂ ಆಗಿದ್ದು, ನಿಜವಾಗಿಯೂ 'ವಿದ್ಯಾ ಪರಿಣತರ ಲಂಕಾರಕಾರಕವಾದ ಕಾವ್ಯವನ್ನು ರಚಿಸಿದ ಸಾರ್ವಕಾಲಿಕ ಕವಿಯೆನಿಸಿ ಕನ್ನಡಿಗರ ಹೃನ್ಮನಗಳಲ್ಲಿ ವಿರಾಜಮಾನನಾಗಿದ್ದಾನೆ. ಪಂಡಿತ-ಪಾಮರರೆಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದು ಕನ್ನಡ ಮನೆಮನೆಗಳಲ್ಲಿ ಸ್ಮರಿಸಲ್ಪಡುತ್ತಿದ್ದಾನೆ.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಶ್ರೀಮತಿ ಮತ್ತು ಹೆರ್ಗ ಶ್ರೀ ನಿರಂಜನರಾವ್ ಇವರ ಪುತ್ರ **ನಿಶಿತ್** ಹಾಗೂ ಶ್ರೀಮತಿ ಲಲಿತಾ ಮತ್ತು ಹೊಸನಗರ ಶ್ರೀ ಕೆ. ಎಸ್. ರಾಘವೇಂದ್ರರಾವ್‌ರವರ ಪುತ್ರಿ **ರೇಷ್ಮಾ ಕುಮಾರಿ** ಇವರ ವಿವಾಹವು ತಾ.13-11-2011 ರಂದು ಹೆಬ್ರಿ ಶ್ರೀ ಅನಂತಪದ್ಮನಾಭ ಸನ್ನಿಧಿಯಲ್ಲಿ ನೆರವೇರಿತು.

★★★★

ತಾಳೆಪ್ಪಾಡಿ ಕೀರ್ತಿಶೇಷ ಚಂದ್ರಶೇಖರರಾವ್ ಮತ್ತು ಶ್ರೀಮತಿ ಮನೋರಮ ಇವರ ಪುತ್ರ **ರವಿಪ್ರಶಾಂತ** ಹಾಗೂ 92ನೇ ಹೇರೂರು ಶ್ರೀ ಅರವಿಂದ ಶ್ಯಾನುಭೋಗ್ ಮತ್ತು ಶ್ರೀಮತಿ ಮಂಜುಳ ಇವರ ಪುತ್ರಿ **ಅಮೃತ** ಇವರ ವಿವಾಹವು ತಾ.13-11-2011ರಂದು ಉಡುಪಿ ಸಗ್ರಿ ಶ್ರೀ ವಾಸುಕೀ ಸುಬ್ರಹ್ಮಣ್ಯ ದೇವಸ್ಥಾನದ ಬಳಿ ಇರುವ ಅನಂತಸಭಾಭವನದಲ್ಲಿ ನೆರವೇರಿತು.

★★★★

ಶ್ರೀಮತಿ ನಿರ್ಮಲ ವಿ.ರಾವ್ ಮತ್ತು ಶ್ರೀ ಬಿ.ವಿ.ವೇಣುಗೋಪಾಲ ರಾವ್ ಇವರ ಪುತ್ರಿ **ಅಪರ್ಣಾ ರಾವ್** ಹಾಗೂ ಶ್ರೀಮತಿ ಲತಾ ರಾವ್ ಮತ್ತು ಶ್ರೀ ಎನ್.ನಾಗೇಂದ್ರ ರಾವ್ ಇವರ ಪುತ್ರ **ಎನ್.ನವನೀತ್** ಇವರ ವಿವಾಹವು ತಾ.13-11-2011ರಂದು ಬೆಂಗಳೂರಿನ ನೆಟ್ಟಕಲ್ಲಪ್ಪ ಸರ್ಕಲ್‌ನಲ್ಲಿರುವ ಶ್ರೀ ವಾದಿರಾಜ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಪಾದೆಬೆಟ್ಟು ಶ್ರೀಮತಿ ಮತ್ತು ಶ್ರೀ ರವಿಪ್ರಕಾಶ್ ರವರ ಪುತ್ರ **ಅವಿನಾಶ್** ಹಾಗೂ ಎಲ್ಲೂರು ಶ್ರೀಮತಿ ಮತ್ತು ಶ್ರೀ ಮಾಧವರಾಯರ ಪುತ್ರಿ **ಸುಮನ** ಇವರ ವಿವಾಹವು ತಾ.04-12-2011ರಂದು ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

★★★★

ಕೆಳಗಿನ ಕ್ಯಾದಿಗೆ ಶ್ರೀಮತಿ ಪ್ರಸನ್ನ ಕುಮಾರಿ ಮತ್ತು ಶ್ರೀ ರಾಜಗೋಪಾಲ ರಾಯರ ಪುತ್ರ **ಸುದರ್ಶನ** ಹಾಗೂ ಎಲ್ಲೂರು ಸಜೆ ಶ್ರೀಮತಿ ಲತಾ ಮತ್ತು ಶ್ರೀ ಸುರೇಶ ರಾಯರ ಪುತ್ರಿ **ಅನ್ವಿತಾ** ಇವರ ವಿವಾಹವು ತಾ.04-12-2011ರಂದು ಉಡುಪಿ ಕುಂಜಿಬೆಟ್ಟು ಸಗ್ರಿ ಶ್ರೀ ವಾಸುಕೀ ಸುಬ್ರಹ್ಮಣ್ಯ ದೇವಸ್ಥಾನದ ಶ್ರೀ ಅನಂತ ಸಭಾಭವನದಲ್ಲಿ ನೆರವೇರಿತು.

★★★★

ಪಾದೆಬೆಟ್ಟು ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಕುಮಾರರಾವ್ ಇವರ ಪುತ್ರ **ಪರೀಕ್ಷಿತ** ಹಾಗೂ ಪಾವಂಜೆ ಶ್ರೀಮತಿ ಸುಕನ್ಯಾ ಮತ್ತು ಶ್ರೀ ಸತೀಶ ರಾವ್ ಇವರ ಪುತ್ರಿ **ಶರಧಿ** ಇವರ ವಿವಾಹವು ತಾ.07-12-2011ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಭೀಮರಥಿ ಶಾಂತಿ

ಡಾ। ಪಿ. ವಿಠಲರಾವ್ ಇವರ 70ನೇ ವರ್ಷದ ಭೀಮರಥಿ ಶಾಂತಿ ಹಾಗೂ ಈ ಶುಭ ಸಂದರ್ಭದಲ್ಲಿ ಚಂಡಿಕಾಹೋಮವು ತಾ.20-11-2011ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನೆರವೇರಿತು.

ಶ್ರೀಯುತ ಡಾ। ಪಿ. ವಿಠಲರಾವ್ ಇವರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಉಡುಪಿ ಹಾಗೂ ಶ್ರೀಶಾರದಾ ಕೋ.ಅಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿದ್ದು ಈಗ ಸಂಘದ ಸಲಹೆಗಾರರಾಗಿರುತ್ತಾರೆ. ಇವರ ಭೀಮರಥಿ ಶಾಂತಿಯಲ್ಲಿ ಅಧಿಕ ಸಂಖ್ಯೆಯಲ್ಲಿ ಬಂಧುಗಳು ಮತ್ತು ಸಮಾಜ ಬಾಂಧವರು ಸೇರಿ ಇವರಿಗೆ ಶುಭ ಕೋರಿದರು. ಇವರ ಆಯುರಾರೋಗ್ಯ ವೃದ್ಧಿಯಾಗಿ ನಮ್ಮ ಸಂಘಕ್ಕೆ ಇವರ ಅಮೂಲ್ಯ ಸೇವೆ ಇನ್ನು ಮುಂದೆಯೂ ಸಿಗಲಿ ಎಂದು ಶ್ರೀಶಾರದೆಯಲ್ಲಿ ಪ್ರಾರ್ಥಿಸೋಣ.

## MY DREAM

Everyone has a dream,
Which is filled with colours and cream

When I see my report card in my hand
I think of becoming a lecturer in my mind

Lecturer is my choice,
because for me it is nice

Every job gives you earning,
But this is full of learning.

I think of this colourfull dream,
Even when I eat icecream !

**-Pragathi Bhandi, Perdoor**
10th Std., MJC, Manipal

**ಚುಟುಕ**

ಶಾರದಾ ನಗರದಿ ನೆಲೆಸಿಹ ಅಭಯವರದೆ
ಬೇಡಿದ ವರಗಳ ನೀಡೆಂದು ನಾನಿನ್ನ ಕರೆದೆ
ತ್ರಿಕಾಲ ಪೂಜೆಯಿಂದ ಶೋಭಿಸುವ ಆರಾಧ್ಯೆ
ನೋಡುಗರ ಆಕರ್ಷಿಸುತಿಹಳು ನಮ್ಮಮ್ಮ ಶಾರದೆ

**-ವೈ. ಎ. ರಾವ್**




**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)



## ಕು| ಎಚ್. ರಶ್ಮಿರಾವ್

ಅಭಿನಂದನೆ

ಕುಮಾರಿ ಎಚ್. ರಶ್ಮಿರಾವ್, ಮಜೂರು, ಕಾಪು (23 ವರ್ಷ) ಇವರು ಮಂಗಳೂರು ವಿಶ್ವವಿದ್ಯಾನಿಲಯವು ಕಳೆದ ಜೂನ್ 2011ರಂದು ನಡೆಸಿದ ಮಾನವ ಸಂಪನ್ಮೂಲ ಅಭಿವೃದ್ಧಿ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್) ಶೇ.71ರಷ್ಟು ಅಂಕ ಗಳಿಸಿ ಪಾಸಾಗಿದ್ದಾರೆ.

ಇವರು ಡಮೂಡುಬಿದಿರೆ ಆಳ್ವಾಸ್ ಕಾಲೇಜಿನ ಮಾನವ ಸಂಪನ್ಮೂಲ ಸ್ನಾತಕೋತ್ತರ ವಿಭಾಗದ (MHRD) ವಿದ್ಯಾರ್ಥಿನಿ. ನಮ್ಮ ಸಮಾಜದ ಪ್ರಪ್ರಥಮ ಮಾನವ ಸಂಪನ್ಮೂಲ ಸ್ನಾತಕೋತ್ತರ ಪದವೀಧರೆ ಎಂಬ ಹೆಗ್ಗಳಿಕೆ ಇವರದು.

ಇವರು ಕಾಪು ಮಜೂರಿನ ಶ್ರೀ ಹೆಚ್. ಮಲ್ಲಿಕಾರ್ಜುನ ರಾವ್ ಹಾಗೂ ಪಿ.ಕುಮಾರಿಬಾಯಿ ದಂಪತಿಗಳ ಏಕಮಾತ್ರ ಪುತ್ರಿ. ಇವರಿಗೆ ಶ್ರೀಶಾರದಾ ಅಭಿನಂದನೆಗಳು

## ನಿಧನ

### ಉಮೇಶ್ ರಾವ್

ಹಿರಿಯ ಯಕ್ಷಗಾನ ಕಲಾವಿದ, ಸಮರ್ಥ ಸಂಘಟಕ, ನಿವೃತ್ತ ಶಿಕ್ಷಕ ಎಂ.ಉಮೇಶ್ ರಾವ್ (74) ನ.17ರಂದು ನಿಧನ ಹೊಂದಿದರು. ಅವರು ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಸುರತ್ಕಲ್‌ನ ತಡಂಬೈಲ್‌ನಲ್ಲಿ ವಾಸ್ತವ್ಯಹೊಂದಿದ್ದ ಅವರು ಅಗ್ಗಿದಕಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 35 ವರ್ಷ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದರು.

ಅತ್ಯುತ್ತಮ ಸಂಘಟರಾಗಿದ್ದ ಅವರು ಯಕ್ಷಗಾನ ಬಯಲಾಟ, ತಾಳಮದ್ದಳೆಯಲ್ಲಿ ಅರ್ಥದಾರಿಯಾಗಿದ್ದು ಅನೇಕ ಕಲಾವಿದರಿಗೆ ಮಾರ್ಗದರ್ಶಕರಾಗಿದ್ದರು.

★★★ ★★★

### ಕುಂಜಾರು ರಮ ರಾವ್

ಕುಂಜಾರು ಸೀತಾರಾಮರಾವ್ (ಬಾಬು ರಾವ್) ಇವರ ಧರ್ಮಪತ್ನಿ ಕುಂಜಾರು ರಮ ರಾವ್ (79 ವರ್ಷ) ಇವರು ಅಲ್ಪಕಾಲದ ಅನಾರೋಗ್ಯದಿಂದ ತಾ.08-12-2011ರಂದು ಪುತ್ತೂರಿನ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ. ಇವರು ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಅಧ್ಯಕ್ಷ ದಿ| ಎ. ಕೃಷ್ಣರಾವ್ ಇವರ ಸಹೋದರಿ. ಇವರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ

★★★ ★★★

### ಅರ್ಪಿತಾ ಡಿ.ರಾವ್

ಕಟಪಾಡಿ ಮೂಡಬೆಟ್ಟು ದಿ| ದಿನೇಶ ರಾಮಕೃಷ್ಣರಾವ್‌ರವರ ಪುತ್ರಿ ಅರ್ಪಿತಾ ಡಿ.ರಾವ್ (17 ವರ್ಷ) ತಾ.28-11-2011ರಂದು ಅನಾರೋಗ್ಯದಿಂದ ನಿಧನರಾಗಿದ್ದಾರೆ. ಇವರು ತಾಯಿ ಹಾಗೂ ಸಹೋದರಿಯನ್ನು ಅಗಲಿರುತ್ತಾರೆ. ಇವರು ಎಮ್‌ಜಿಎಮ್ ಪದವಿಪೂರ್ವಕಾಲೇಜಿನ ದ್ವಿತೀಯ ಪಿಯುಸಿಯ ಪ್ರತಿಭಾನ್ವಿತ ವಿದ್ಯಾರ್ಥಿನಿ.

★★★ ★★★

### ಎಸ್.ಕುಮಾರಸ್ವಾಮಿ

ಉಡುಪಿ ಕಾಡುಬೆಟ್ಟಿನ ಶ್ರೀ ಎಸ್. ಕುಮಾರಸ್ವಾಮಿ (83 ವರ್ಷ) ಇವರು ತಾ.12-12-2011ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ, ಈರ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ. ಇವರು ನಿವೃತ್ತ ಎಲ್‌ಐಸಿ ಅಧಿಕಾರಿಗಳಾಗಿದ್ದು, ಪತ್ರಿಕೆಗಳಲ್ಲಿ ಕಥೆ ಹಾಗೂ ವಿಮರ್ಶೆಗಳನ್ನು ಬರೆಯುತ್ತಿದ್ದರು.

## ಧನು ಮಾಸದ ವಿಶೇಷ ದಿನಗಳು

| | |
|---|---|
| 16-12-2011 | ಧನು ಸಂಕ್ರಮಣ |
| 21-12-2011 | ಸರ್ವೇಕಾದಶೀ |
| 22-12-2011 | ಪ್ರದೋಷಃ |
| 24-12-2011 | ಎಳ್ಳಮಾವಾಸ್ಯಾ |
| 29-12-2011 | ಪೂರ್ವಾಷಾಢ ನಕ್ಷತ್ರಾರಂಭ |
| 05-01-2012 | ಸರ್ವೇಕಾದಶೀ |
| 06-01-2012 | ಪ್ರದೋಷಃ |
| | ಮುಕ್ಕೋಟಿ ದ್ವಾದಶಿ |
| 09-01-2012 | ಪೂರ್ಣಿಮಾ |
| 11-01-2012 | ಉತ್ತರಾಷಾಢ ನಕ್ಷತ್ರಾರಂಭ |
| 12-01-2012 | ಸಂಕಷ್ಟಹರ ಚತುರ್ಥಿ |
| | ಚಂದ್ರೋದಯ ರಾತ್ರಿ, ಘಂಟೆ 9-17 |
| 14-01-2012 | ಮಕರ ಸಂಕ್ರಮಣ |

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

ಡಾ| ವೈ. ಸುದರ್ಶನ ರಾವ್

**ಪ್ರಶ್ನೆ: ಕಣ್ಣಿಗೆ ಪೊರೆ ಬರುವುದು ಅಥವಾ ಕ್ಯಾಟರಾಕ್ಟ (cataract) ಎಂದರೇನು? ಅದರ ಚಿಕಿತ್ಸೆ ಹೇಗೆ?**

**ಉತ್ತರ:** ನಮ್ಮ ಸುತ್ತಮುತ್ತಲಿನ ಪ್ರಪಂಚವನ್ನು ದೃಷ್ಟಿಯ ರೂಪದಲ್ಲಿ ಗ್ರಹಿಸಲಿಕ್ಕಾಗಿ ಇರುವ ಅಂಗ ಕಣ್ಣು. ಕಣ್ಣಿನ ಮೂಲಕ ನಾವು ವಸ್ತುಗಳ ಆಕಾರ, ಗಾತ್ರ, ಬಣ್ಣ ಮತ್ತು ಅದು ಇರುವ ದೂರವನ್ನು ಗ್ರಹಿಸಬಲ್ಲೆವು. ಕಣ್ಣಿನ ರಚನೆಯನ್ನು ಒಂದು ಡಿಜಿಟಲ್ ಕೆಮರಕ್ಕೆ ಹೋಲಿಸಬಹುದು. ಬಿಳಿಯ ಬಣ್ಣದ ಕಣ್ಣುಗುಡ್ಡೆಯೆಂಬ ಉರುಟಾದ ಪೆಟ್ಟಿಗೆಯ ಮುಂಭಾಗದಲ್ಲಿರುವ ಕರಿಗುಡ್ಡೆ (ನಿಜವಾಗಿಯಾದರೆ ಇದು ಗಾಜಿನಂತೆ ಪಾರದರ್ಶಕವಾಗಿದೆ. ಅದರ ಹಿಂಭಾಗದಲ್ಲಿರುವ ಪ್ಯೂಪಿಲ್ ಎಂಬ ಮಾಂಸದ ಬಣ್ಣ ಇದರ ಮೂಲಕ ಕಾಣುವುದರಿಂದ ಇದು ಕಪ್ಪಾಗಿ ಕಾಣುತ್ತದೆ). ಕಾರ್ನಿಯಾ, cornea, ಎಂದೆಲ್ಲಾ ಕರೆಯುವ ಪಾರದರ್ಶಕ ಪರದೆಯ ಮೂಲಕ ಬೆಳಕು ಹಾದು ರೆಟಿನಾ ಎಂಬ ಎಲ್‌ಸಿಡಿ ಪರದೆಯ ಮೇಲೆ ಬೀಳುತ್ತದೆ. ಈ ಪರದೆಯ ಮೇಲೆ ನಾವು ನೋಡುತ್ತಿರುವ ವಸ್ತುವಿನ ಬಿಂಬವು (image) ಸರಿಯಾಗಿ ಬೀಳುವಂತೆ focus ಮಾಡಲು ಮಧ್ಯೆ ಒಂದು ಮಸೂರ (lens)ವಿದೆ. ರೆಟಿನಾ ಪರದೆಯ ಮೇಲೆ ಕಂಡ ವಸ್ತುವಿನ ಆಕಾರ, ಬಣ್ಣ ಮತ್ತು ಅದು ಇರುವ ದೂರವನ್ನು ಮೆದುಳು ರೆಟಿನಾದಿಂದ ಈ ಮಾಹಿತಿಗಳನ್ನು ತರುವ ನರದ (optic nerve) ಮೂಲಕ ಪಡೆದು ಅರ್ಥೈಸಿಕೊಳ್ಳುತ್ತದೆ. ಕಣ್ಣು ನಿಜವಾಗಿಯಾದರೂ ವಸ್ತುವಿನ ಬಿಂಬವನ್ನು ರೆಟಿನಾದ ಮೇಲೆ focus ಮಾಡುವ ಸಾಧನ ಮಾತ್ರ. ದೃಷ್ಟಿ ಗೋಚರವಾಗುವುದು ಮೆದುಳಿನಲ್ಲೇ.

ಕಣ್ಣಿಗೆ ಬಿದ್ದ ಬೆಳಕು ಮಸೂರದ ಮೂಲಕ ಹಾದು ಹೋಗುತ್ತದೆಂದು ಹೇಳಿದೆನಷ್ಟೇ. ಈ ಮಸೂರವು ಸ್ಪಟಿಕದಷ್ಟು ಶುಭ್ರವಾಗಿದೆ ಮತ್ತು ಬೆಳಕು ರೆಟಿನಾದ ಮೇಲೆ ಸರಿಯಾಗಿ ಬೀಳುವಂತೆ ತನ್ನ ಗಾತ್ರವನ್ನು ಬದಲಾಯಿಸಿಕೊಳ್ಳಬಲ್ಲುದು. ಒಂದು ವೇಳೆ ಈ ಮಸೂರವು ಮಸುಕಾದರೆ ಆಗ ಅದರ ಮೂಲಕ ಬೆಳಕು ಸರಿಯಾಗಿ ಹಾದು ಹೋಗುವುದಿಲ್ಲ. ಈ ಕಾಯಿಲೆಯನ್ನು ಕ್ಯಾಟರಾಕ್ಟ್ ಎಂದು ಕರೆಯುತ್ತೇವೆ. ಮೊದಮೊದಲಿಗೆ ಕೇವಲ ಮಸುಕಾಗುವ ಮಸೂರ ದಿನಕಳೆದಂತೆ ಹಳದಿಬಣ್ಣಕ್ಕೆ ತಿರುಗಿ ಅಪಾರದರ್ಶಕವಾಗುತ್ತದೆ. ಇದನ್ನು ಕ್ಯಾಟರಾಕ್ಟ್ ಹಣ್ಣಾಗುವುದು ಎಂದು ಕರೆಯುವರು. ಈ ಪರಿಸ್ಥಿತಿಯಲ್ಲಿ ದೃಷ್ಟಿ ತುಂಬಾ ಕಡಿಮೆಯಾಗುತ್ತದೆ ಅಲ್ಲದೆ ಮಸೂರವು ಪೆಡಸಾಗಿ ಬೆಳಕನ್ನು ರೆಟಿನಾ ಪರದೆಯ ಮೇಲೆ ಸರಿಯಾಗಿ (focus) ಕೇಂದ್ರಿಕರಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ.

ದೃಷ್ಟಿ ಮಂಜಾಗುವುದು ಕ್ಯಾಟರಾಕ್ಟ್‌ನ ಮೊದಲ ಚಿಹ್ನೆ. ಮಸೂರದ ಅಪಾರದರ್ಶಕತನ ಹೆಚ್ಚಾದಂತೆಲ್ಲಾ ದೃಷ್ಟಿ ಕಡಿಮೆಯಾಗುತ್ತಾ ಬರುತ್ತದೆ. ಕಣ್ಣಿನ ಮೇಲೆ ಬೆಳಕು ಹಾಯಿಸಿದಾಗ ಕಣ್ಣಿನ ಕರಿಗುಡ್ಡೆಯ ಮಧ್ಯದಲ್ಲಿ ಗಾಜಿನಂತೆ ಹೊಳೆಯಬೇಕಾದ ಮಸೂರವು ಹಳದಿಬಣ್ಣದ ಮಣಿಯಂತೆ ಕಾಣುತ್ತದೆ. ಕ್ಯಾಟರಾಕ್ಟ್ ಈ ಹಂತಕ್ಕೆ ತಲುಪುವ ಮೊದಲೇ ವೈದ್ಯರು ಕಣ್ಣನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿ ಮಸೂರ ಮಸುಕಾಗಿರುವುದನ್ನು ಪತ್ತೆ ಹಚ್ಚಬಲ್ಲರು.

ವಯಸ್ಸಾದಂತೆ ಮಸೂರವು ತನ್ನಿಂತಾನಾಗೆ ಮಸುಕಾಗುವುದು ಕ್ಯಾಟರ್ಯಾಕ್ಟ್‌ನ ಅತೀ ಸಾಮಾನ್ಯ ಕಾರಣ. ಸಿಹಿಮೂತ್ರ ರೋಗಿಗಳಲ್ಲಿ ಇದು ಸ್ವಲ್ಪ ಸಣ್ಣ ವಯಸ್ಸಿಗೆ ಆಗಬಹುದು. ಬಿಸಿಲಿನಲ್ಲಿ ಯಾವಾಗಲೂ ಇರುವವರಿಗೆ, ಎತ್ತರದ ಪ್ರದೇಶಗಳಲ್ಲಿ ಕೆಲಸ ಮಾಡುವವರಿಗೆ (high altitude) ಸೂರ್ಯನ ಅತಿನೇರಳೆ ಕಿರಣಗಳ ಪ್ರಭಾವದಿಂದಾಗಿ ಈ ತೊಂದರೆ ಬೇಗನೆ ಬರುವ ಅಪಾಯವಿದೆ. ಕೆಲವು ಅನುವಂಶಿಕ ಕಾಯಿಲೆಗಳಿಂದ ಹಾಗೂ ಗರ್ಭದಲ್ಲಿರುವಾಗಲೇ ತಾಯಿಯಿಂದ ತಗಲಿಸಿಕೊಂಡ ವೈರಸ್‌ಗಳಿಂದಾಗಿ ಸಣ್ಣ ಮಕ್ಕಳಿಗೇ ಈ ಕಾಯಿಲೆ ಬರಬಹುದು. ಕಣ್ಣಿಗೆ ಏಟು ಬೀಳುವುದು, ಕೆಲವು ಔಷಧಗಳ ಸೇವನೆ, ಮದ್ಯಪಾನ, ಧೂಮಪಾನ, ವಾಯುಮಾಲಿನ್ಯ, ಅಯೋಡಿನ್ ಕೊರತೆ, ಕುಷ್ಠರೋಗ, ಥೈರೋಯ್ಡ್ ಗ್ರಂಥಿಯ ಕಾಯಿಲೆ ಹೀಗೆ ಇನ್ನೂ ಅನೇಕ ಅಪರೂಪದ ಕಾರಣಗಳಿಂದಾಗಿ ಕಣ್ಣಿನ ಮಸೂರವು ಮಸುಕಾಗಿ ಕ್ಯಾಟರಾಕ್ಟ್ ಖಾಯಿಲೆ ಬರಬಹುದು.

ಮಸುಕಾದ ಮಸೂರವನ್ನು ತೆಗೆದು ಅಲ್ಲಿ ಪ್ಲಾಸ್ಟಿಕ್ಕಿನ ಅಥವಾ ಅಕ್ರಿಲಿಕ್‌ನ ಕೃತಕ ಮಸೂರವನ್ನು ಅಳವಡಿಸುವುದು ಕ್ಯಾಟರಾಕ್ಟ್ ಕಾಯಿಲೆಯ ಆಧುನಿಕ ಚಿಕಿತ್ಸೆ. ದೃಷ್ಟಿದೋಷ ಹೆಚ್ಚಿಲ್ಲದಿದ್ದರೆ ಕೇವಲ ಕನ್ನಡಕ ಬದಲಾಯಿಸಿದರೆ ಸಾಕಾಗಬಹುದು. ಕ್ಯಾಟರಾಕ್ಟ್ ಸರ್ಜರಿ ಸರಳವಾದದ್ದೂ ಹಾಗೂ ಅತೀ ಕಡಿಮೆ ಅಡ್ಡಪರಿಣಾಮ ಉಳ್ಳದ್ದೂ ಹಾಗೂ ರೋಗಿಗೆ ಶಸ್ತ್ರಚಿಕಿತ್ಸೆಯ ನಂತರ ದೃಷ್ಟಿಯನ್ನು ಗಮನಾರ್ಹವಾಗಿ ಮರಳಿಸುವಂತಾದ್ದೂ ಆಗಿರುವುದರಿಂದ ಕ್ಯಾಟರಾಕ್ಟ್‌ನಿಂದಾಗಿ ದೃಷ್ಟಿದೋಷವುಳ್ಳವರು ಕ್ಯಾಟರಾಕ್ಟ್ ಹಣ್ಣಾದ ನಂತರ ಶಸ್ತ್ರಚಿಕಿತ್ಸೆ ಮಾಡಿಸೋಣ ಎಂದು ಕಾಯುತ್ತಾ ನರಳುವುದು ವ್ಯರ್ಥ.

ಕೆಲವು ಬಿಂದುಗಳ (drops) ರೂಪದಲ್ಲಿ ಬಳಸುವ ಔಷಧಗಳು ಕಣ್ಣ ಬಿಂಬವನ್ನು ಅಗಲಿಸಿ ಕಣ್ಣಿನೊಳಗೆ ಹೆಚ್ಚು ಬೆಳಕು ಹೊಕ್ಕುವಂತೆ ಮಾಡುತ್ತವೆ. ಈ ಔಷಧಿಗಳ ಬಳಕೆಯಿಂದ ದೃಷ್ಟಿ ಉತ್ತಮವಾದಂತೆ ಕಂಡರೂ ಈ ಪರಿಣಾಮ ತಾತ್ಕಾಲಿಕ ಮಾತ್ರ. ಅಲ್ಲದೇ ಈ ಔಷಧಗಳಿಗೆ ಕೆಟ್ಟ ಅಡ್ಡಪರಿಣಾಮಗಳೂ ಇವೆ.

ಕೃತಕ ಮಸೂರವನ್ನು ಅಳವಡಿಸದೆ ಕೇವಲ ಮಸುಕಾದ ಮಸೂರವನ್ನು ಮಾತ್ರ ತೆಗೆಯುವ ಚಿಕಿತ್ಸೆ ಈಗ ಬಳಕೆಯಲ್ಲಿ ಇಲ್ಲ. ಆದರೆ ನಮ್ಮ ದೇಶದ ಮಹಾನ್ ಶಸ್ತ್ರಚಿಕಿತ್ಸಾ ತಜ್ಞನಾದ ಸುಶ್ರುತನು ವಿವರಿಸಿದ್ದನೆಂದೂ, ಆ ಕಾಲದಲ್ಲಿ ವಿದೇಶಗಳಿಂದಲೂ ಈ ಚಿಕಿತ್ಸೆಗಾಗಿ ಭಾರತಕ್ಕೆ ರೋಗಿಗಳು ಬರುತ್ತಿದ್ದರೆಂದೂ ಇತಿಹಾಸಕಾರರು ಹೇಳುವಂತಹದ್ದಕ್ಕೆ ಹೋಲಿಕೆಯಿರುವ ಈ ಶಸ್ತ್ರಚಿಕಿತ್ಸೆಯು ಸುಮಾರು ಕಳೆದ ಶತಮಾನದ ಕೊನೆಯ ತನಕವೂ ಬಳಕೆಯಲ್ಲಿತ್ತು. ಈಗ ಕ್ಯಾಟರಾಕ್ಟ್ ಸರ್ಜರಿಯ ಬಗ್ಗೆ ಹೇಳುವುದಾದರೆ, ಇದು ಕೃತಕ ಮಸೂರದ ಯುಗ. ನಿಜವಾದ ಮಸೂರಕ್ಕಿಂತಲೂ ಉತ್ತಮವೆನ್ನಬಹುದಾದ ಹೈಟೆಕ್ ಮಸೂರಗಳು ಇಂದು ಲಭ್ಯವಿದೆ.

ಸಾಮಾನ್ಯವಾಗಿ ಕ್ಯಾಟರ್ಯಾಕ್ಟ್ ಶಸ್ತ್ರಚಿಕಿತ್ಸೆಯಲ್ಲಿ ಬಳಸುವ ಮಸೂರಗಳನ್ನು 'ಮೊನೋಫೋಕಲ್ ಲೆನ್ಸ್' ಅಂದರೆ 'ದೂರದೃಷ್ಟಿಗೆ ಮಾತ್ರ ಅಥವಾ ಸಮೀಪ ದೃಷ್ಟಿಗೆ ಮಾತ್ರ ಉಪಯೋಗವಾಗುವ ಮಸೂರ' ಎಂದು ಕರೆಯುತ್ತಾರೆ. ಹೆಚ್ಚಾಗಿ ವೈದ್ಯರು ದೂರದೃಷ್ಟಿಗೆ ಹೊಂದಿಕೊಳ್ಳುವ ಮಸೂರವನ್ನು ಬಳಸುತ್ತಾರೆ. ಈ ಕೃತಕ ಮಸೂರವನ್ನು ಅಳವಡಿಸಿಕೊಂಡರೆ ಸಮೀಪ ದೃಷ್ಟಿಗೆ ಕನ್ನಡಕ ಧರಿಸಬೇಕಾಗುತ್ತದೆ. ಈ ಕೃತಕ ಮಸೂರ ಅಥವಾ ಕನ್ನಡಕಗಳು ವಸ್ತು ಇರುವ ದೂರಕ್ಕನುಗುಣವಾಗಿ ತಮ್ಮ focal lengthನ್ನು ಬದಲಾಯಿಸಿಕೊಳ್ಳುವುದಿಲ್ಲವಾದುದರಿಂದ ನೋಡುತ್ತಿರುವ ಒಂದು ವಸ್ತು ಅಸ್ಪಷ್ಟವಾಗಿ ಕಂಡರೆ ಆಗ ಸ್ವತಹಾ ನಾವೇ ಆ ವಸ್ತುವಿನ ಹತ್ತಿರ ಅಥವಾ ಅದರಿಂದ ದೂರ ನಿಂತು ನೋಡಬೇಕಾಗುತ್ತದೆ. (ಸರ್ವೇ ಸಾಮಾನ್ಯವಾಗಿ ಅಕ್ರಿಲಿಕ್‌ನಿಂದ ಮಾಡಿದ ಮೋನೋಫೋಕಲ್ ಲೆನ್ಸ್ ಬಳಸುತ್ತಾರೆ)

ಸಮೀಪದ ವಸ್ತುಗಳು ಮತ್ತು ದೂರದ ವಸ್ತುಗಳು ಎರಡೂ ಸರಿಯಾಗಿ ಗೋಚರಿಸುವಂತೆ ಮಾಡುವ ಸಾಮರ್ಥ್ಯವುಳ್ಳ ಮಸೂರಗಳನ್ನು 'ಮಲ್ಟಿಫೋಕಲ್ ಲೆನ್ಸ್' ಎಂದು ಕರೆಯುತ್ತಾರೆ. ಈ ಮಸೂರ ಅಳವಡಿಸಿದರೆ ಮುಂದೆ ಕನ್ನಡಕ ಧರಿಸುವ ಅಗತ್ಯವಿರುವುದಿಲ್ಲ. ಅದೇ ರೀತಿ ಬೆಳಕಿನ ಅತಿನೇರಳೆ ಕಿರಣಗಳನ್ನು ಹೀರಿಕೊಳ್ಳುವ, ಕಣ್ಣಿನ ಅಸ್ಟಿಗ್ಮ್ಯಾಟಿಸಂ ಎಂಬ ತೊಂದರೆಯನ್ನು ಕನ್ನಡಕ ಧರಿಸದೆ ಗುಣಮಾಡುವಂತಹಾ ಮಸೂರಗಳೂ ಲಭ್ಯವಿವೆ. ಇಂತಹಾ ಮಸೂರಗಳು ಸ್ವಲ್ಪ ದುಬಾರಿ (ಸುಮಾರು ರೂ.50,000)

ಕೃತಕ ಮಸೂರವನ್ನು ಅಳವಡಿಸುವ ಶಸ್ತ್ರಚಿಕಿತ್ಸೆಯಲ್ಲಿ ಕಣ್ಣಿಗೆ ಔಷಧದ ಬಿಂದುಗಳನ್ನು ಹಾಕಿ ಅಥವಾ ಕಣ್ಣಿಗೆ ಚುಚ್ಚುಮದ್ದು ಚುಚ್ಚಿ, ಕಣ್ಣಿನ ನೋವಿನ ಸಂವೇದನೆಯನ್ನು ಮಾತ್ರ ನಿವಾರಿಸಿ (local anaesthesia), ಸೂಕ್ಷ್ಮದರ್ಶಕವನ್ನು ಉಪಯೋಗಿಸಿಕೊಂಡು, ಕಣ್ಣಿನ ಕರಿಗುಡ್ಡೆಯ ಅಂಚಿನ ಮೇಲೆ ಸಣ್ಣ ಗಾಯ ಮಾಡಿ, ಅದರ ಮೂಲಕ ಮಸೂರವನ್ನು ಹೊರ ತೆಗೆಯುತ್ತಾರೆ. ಅನಂತರ ಮಸೂರ ಇದ್ದ ಜಾಗದಲ್ಲಿ ಕೃತಕ ಮಸೂರವನ್ನು ಕೂರಿಸುತ್ತಾರೆ. ಈ ಅಪರೇಶನನ್ನು ಫೇಕೋಎಮುಲ್ಸಿಫಯರ್ ಎಂಬ ಉಪಕರಣವನ್ನು ಬಳಸಿ ಮಾಡಿದರೆ, ತುಂಬಾ ಸಣ್ಣ ಗಾಯದ ಮೂಲಕ ಮಾಡಬಹುದು. ಇದೇ ಶಸ್ತ್ರಚಿಕಿತ್ಸೆಯನ್ನು ಲೇಸರ್ ಬಳಸಿ ಮಾಡಬಹುದಾದ ಉಪಕರಣವನ್ನು ಅಭಿವೃದ್ಧಿಪಡಿಸುತ್ತಿದ್ದಾರೆ.

ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆಯ ನಂತರ ರೋಗಿಯು ಸುಮಾರು ಒಂದೂವರೆ ತಿಂಗಳ ಕಾಲ ಧೂಳಿಗೆ ಹೋಗಬಾರದು. ಕಣ್ಣಿನ ಒಳಗೆ ನೀರು ಹಾಕಿ ತೊಳೆಯಬಾರದು. ಬಿಸಿಲಿಗೆ ಮತ್ತು ಹೊರಗೆ ಹೋಗುವಾಗ ಕಪ್ಪು ಕನ್ನಡಕ ಧರಿಸಬೇಕು.

ಕಣ್ಣಿನೊಳಗೆ ರಕ್ತಸ್ರಾವವಾಗುವುದು ಮತ್ತು ಕೂರಿಸಿದ ಮಸೂರ ಜಾರುವುದು ಈ ಶಸ್ತ್ರಚಿಕಿತ್ಸೆಯಲ್ಲಿ ಕಾಣಿಸಿಕೊಳ್ಳಬಹುದಾದ ತೊಂದರೆಗಳು. ಈಗಾಗಲೇ ಬೇರೆ ಕಾಯಿಲೆಗಳಿಗೆ ಸೇವಿಸುತ್ತಿರುವ ಔಷಧಿಯ ಪ್ರಭಾವದಿಂದಲೂ ಈ ತೊಂದರೆ ಉದ್ಭವಿಸಬಹುದಾದ್ದರಿಂದ ತಾನು ತೆಗೆದುಕೊಳ್ಳುತ್ತಿರುವ ಔಷಧಿಯ ವಿವರಗಳನ್ನು ವೈದ್ಯರಿಗೆ ಸರಿಯಾಗಿ ಕೊಟ್ಟಿರಬೇಕು.

ಶಸ್ತ್ರಚಿಕಿತ್ಸೆ ಮಾಡಿದ ಮೇಲೆ ಕಣ್ಣಿನೊಳಗೆ ನಂಜಾಗುವುದು (infection) ಕಣ್ಣನ್ನೇ ಕಳೆದುಕೊಳ್ಳಬಹುದಾದಷ್ಟು ಅಪಾಯಕಾರಿ ತೊಂದರೆ. ಆದುದರಿಂದ ನನ್ನ ಸಲಹೆಯೇನೆಂದರೆ ಈ ಶಸ್ತ್ರಚಿಕಿತ್ಸೆಯನ್ನು ಅನುಕೂಲತೆ ಉಳ್ಳವರು ಕಣ್ಣು ಅಪರೇಷನ್ ಮಾಡುವ ಶಿಬಿರಗಳಲ್ಲಿ ಮಾಡಿಸಿಕೊಳ್ಳದೆ ಸ್ವಚ್ಛ ಪರಿಸರವನ್ನು ಕಾಪಾಡಿಕೊಂಡಿರುವ ಒಳ್ಳೆಯ ಆಸ್ಪತ್ರೆಯಲ್ಲಿ ಮಾಡಿಸಿಕೊಳ್ಳಬೇಕು. ಸಿಹಿಮೂತ್ರ ರೋಗಿಗಳು ತಮ್ಮ ರಕ್ತದ ಸಕ್ಕರೆಯ ಅಂಶವನ್ನು ಸೂಕ್ತ ಚಿಕಿತ್ಸೆಯ ಮೂಲಕ ಹದ್ದುಬಸ್ತಿನಲ್ಲಿಟ್ಟಿರಬೇಕು. ಹಾಗೂ ಶಸ್ತ್ರಚಿಕಿತ್ಸೆಯ ನಂತರ 45 ದಿನಗಳ ಕಾಲ ಮನೆಯಿಂದ ಹೊರಗೆ ಸುತ್ತಾಡಲು ಹೋಗಬಾರದು ಮತ್ತು ರಾತ್ರಿ ಹೊರತುಪಡಿಸಿ ಉಳಿದ ಸಮಯದಲ್ಲಿ ಕಪ್ಪು ಕನ್ನಡಕ ಧರಿಸಬೇಕು.

ಕ್ಯಾಟರಾಕ್ಟ್ ಖಾಯಿಲೆಯನ್ನು ನಿರ್ಲಕ್ಷಿಸಿದರೆ ಅಂಧತನ ಉಂಟಾಗುವುದು. ನಮ್ಮ ದೇಶದ ಅರ್ಧದಷ್ಟು ಜನ ಅಂಧರು ಈ ಖಾಯಿಲೆಯಿಂದಲೇ ಅಂಧರಾಗಿದ್ದಾರೆ. ಈ ಅಂಧತನವು ಮುಂದೆ ಶಸ್ತ್ರಚಿಕಿತ್ಸೆ ಮಾಡಿದರೂ ವಿವಿಧ ಕಾರಣಗಳಿಂದಾಗಿ ಸರಿಯಾಗದೆ ಇರಬಹುದು. ಹಾಗಾಗಿ ಕ್ಯಾಟರಾಕ್ಟ್ ಖಾಯಿಲೆಗೆ ಸಕಾಲದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸುವುದು ಅತೀ ಮುಖ್ಯ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ.: 98451 36322**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ

ಶಾರದಾನಗರ, ಕುಂಜಿಬೆಟ್ಟು, ಉಡುಪಿ

### 2010-11ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಪ್ರಿಯರೇ, 27-10-2011

ಸಂಘದ ವಾರ್ಷಿಕ ಮಹಾಸಭೆಯು ತಾ.25-12-2011ನೇ ರವಿವಾರ ಮಧ್ಯಾಹ್ನ 4-00 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. 2010-2011ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
4. 2009-2010ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿ ಅಂಗೀಕಾರ
5. 2010-2011ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
6. 2010-2011ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
7. 2011-2012ನೇ ವರ್ಷಕ್ಕೆ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
8. 2011-2012ನೇ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ
9. ಅಧ್ಯಕ್ಷರ ಅನುಮತಿಯ ಮೇರೆಗೆ ಬರತಕ್ಕ ಇತರ ವಿಷಯಗಳು
10. ಧನ್ಯವಾದ ಸಮರ್ಪಣೆ

ಸಹಿ/-

ಕಾರ್ಯದರ್ಶಿ

ವಿ.ಸೂ. : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ಮಹಾಸಭೆಯ 5 ದಿನಗಳಿಗೆ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಪತ್ರ ಮೂಲಕ ತಲಪಿಸಬೇಕು.

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.), ಉಡುಪಿ.

ಎಲ್.ನಂ.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 1. ಫೋನ್ : 2522408

### ವಿಶೇಷ ಮಹಾಸಭೆಯ ನೋಟೀಸು

ನಮ್ಮ ಸೊಸೈಟಿಯ ವಿಶೇಷ ಮಹಾಸಭೆಯು ತಾ.24-12-2011ನೇ ಶನಿವಾರ ಅಪರಾಹ್ನ 4-00 ಗಂಟೆಗೆ ಸೊಸೈಟಿಯ ಕಚೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಮಾನ್ಯ ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.

**ಕಾರ್ಯಕ್ರಮ**

1. 2010-2011ನೇ ಸಾಲಿನ ಲೆಕ್ಕಪರಿಶೋಧಕರ ವರದಿಯ ಅಂಗೀಕಾರ.
2. 2010-2011ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

''ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ''

ಅಧ್ಯಕ್ಷರು ಕಾರ್ಯದರ್ಶಿ

## ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.), ಉಡುಪಿ.

ಎಲ್.ನಂ.31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 1. ಫೋನ್ : 2522408

### ಬೇಕಾಗಿದ್ದಾರೆ

ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)ಯಲ್ಲಿ ಈ ಕೆಳಗಿನ ಹುದ್ದೆಗಳಿಗೆ ಕಂಪ್ಯೂಟರ್ ಅನುಭವವಿರುವ ಪದವೀಧರ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸಂಖ್ಯೆ

1. ಶಾಖಾ ವ್ಯವಸ್ಥಾಪಕರು - 1
2. ಕ್ಲಾರ್ಕ್/ಎಟೆಂಡರ್ - 1

ಆಸಕ್ತ ಅಭ್ಯರ್ಥಿಗಳು ತಮ್ಮ ವಯಸ್ಸು, ಭಾವಚಿತ್ರ, ವಿದ್ಯಾರ್ಹತೆ (ಅಂಕಪಟ್ಟಿಯ ಪ್ರತಿಯೊಂದಿಗೆ), ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳೊಂದಿಗೆ ತಮ್ಮ ಅರ್ಜಿಯನ್ನು ಮೇಲೆ ತಿಳಿಸಿದ ವಿಳಾಸಕ್ಕೆ ಪ್ರತ್ಯಕ್ಷವಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೇಳಿಕೊಳ್ಳಲಾಗಿದೆ.

ವಿ.ಸೂ. : ವಿಳಾಸದಲ್ಲಿ ದೂರವಾಣಿ ಸಂಖ್ಯೆ ನಮೂದಿಸಬೇಕು.

- ಕಾರ್ಯದರ್ಶಿ


ಎಮ್. ದೇವಾನಂದ್ ಭಟ್

Cell : 9845644556

ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೋ

ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



ಬೆಳ್ವಾಯಿ-574213

(08258)-276177 (O), (918258)-324133 (O), 276777 (R)

ಎಡಪದವು - 574 164 (0824)-256374 (O) ಮಂಗಳೂರು, ದ.ಕ.


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: ''ಸತ್ಸಂಗದವರಿಂದ ಭಜನೆ'' ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: ''ಸೌಂದರ್ಯಲಹರಿ ಪಾರಾಯಣ'' ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''ಪಾರಾಯಣ'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.12-01-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.14-01-2012 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.29-12-2011 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.25-12-2011 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ

ಧರ್ಮಶಾಲೆ, ಬಾರಕೂರು

ಶ್ರೀ ಸನ್ನಿಧಿಯಲ್ಲಿ ವರ್ಷಂಪ್ರತಿ ಜರಗುವ

### ವಾರ್ಷಿಕೋತ್ಸವ ಮತ್ತು ಢಕ್ಕೆ ಬಲಿ ಸೇವೆಯು

ಸ್ವಸ್ತಿ ಶ್ರೀ ಖರ ನಾಮ ಸಂವತ್ಸರದ ಧನು ಸಂಕ್ರಮಣ ತಾ.16-12-2011ನೇ ಶುಕ್ರವಾರ ರಾತ್ರಿ ಜರಗಲಿರುವುದು.

ಅಲ್ಲದೆ ಅದೇ ದಿನ ಮಧ್ಯಾಹ್ನ 1-00 ಗಂಟೆಗೆ

**ಮಹಾಅನ್ನಸಂತರ್ಪಣೆ**

ಜರಗಲಿರುವುದು. ಊರ ಪರವೂರ ಭಕ್ತ ಮಹನೀಯರುಗಳು ಸರ್ವ ಸಹಕಾರವನ್ನಿತ್ತು ಸೇವಾ ಕಾಲದಲ್ಲಿ ಶ್ರೀ ಸನ್ನಿಧಿಗೆ ಆಗಮಿಸಿ, ಶ್ರೀದೇವಿಯ ಸಿರಿಮುಡಿ ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಹಾಗೂ ಶ್ರೀ ನಾಗ ಸುಬ್ರಹ್ಮಣ್ಯ ದೇವರ ಪರಮಾನುಗ್ರಹ ಪಡೆದು ಕೃತಾರ್ಥರಾಗಬೇಕಾಗಿ ಪ್ರಾರ್ಥನೆ.

॥ ಸರ್ವೇ ಜನಾಃ ಸುಖಿನೋ ಭವಂತು ॥

**ಅನಂತಪದ್ಮನಾಭ**

ಪ್ರಧಾನ ಅರ್ಚಕರು, ಅನುವಂಶೀಯ ಆಡಳಿತ ಮೊಕ್ತೇಸರರು

ಶ್ರೀ ಮಾಸ್ತಿ ಅಮ್ಮನವರ ದೇವಸ್ಥಾನ, ಧರ್ಮಶಾಲೆ, ಬಾರಕೂರು-576210, ಉಡುಪಿ ಜಿಲ್ಲೆ

ದೂರವಾಣಿ : 0820-2587522, ಮೊಬೈಲ್ : 9448108618

ಸ್ವಾಗತ ಬಯಸುವ : ಮಾಸ್ತಿಬೈಲು ಕುಟುಂಬಸ್ಥರು, ಬಾರಕೂರಿನ ಹತ್ತು ಸಮಸ್ತರು

### ಪಾಕೇಟ್ ಕ್ಯಾಲೆಂಡರ್ 2012

| | | | | | ಜನವರಿ-31 ಏಪ್ರಿಲ್-30 ಜುಲೈ-31 | ಅಕ್ಟೋಬರ್-31 | ಮೇ-31 | ಫೆಬ್ರವರಿ-29 ಆಗಸ್ಟ್-31 | ಮಾರ್ಚ್-31 ನವೆಂಬರ್-30 | ಜೂನ್-30 | ಸೆಪ್ಟೆಂಬರ್-30 ಡಿಸೆಂಬರ್-30 |
|---|---|---|---|---|---|---|---|---|---|---|---|
| 1 | 8 | 15 | 22 | 29 | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| 2 | 9 | 16 | 23 | 30 | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ |
| 3 | 10 | 17 | 24 | 31 | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ |
| 4 | 11 | 18 | 25 | ★ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ |
| 5 | 12 | 19 | 26 | ★ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ |
| 6 | 13 | 20 | 27 | ★ | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು |
| 7 | 14 | 21 | 28 | ★ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ |

01-01-2013 : ಮಂಗಳವಾರ

ರಚನೆ : ಮ.ಮ. ಹೆಬ್ಬಾರ್, ಬೇಳಂಜೆ

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org